ಹಣಕಾಸು ಹೇಳಿಕೆಗಳನ್ನು ಭಾರತೀಯ ರೂ.ಗಳಲ್ಲಿ ತಯಾರಿಸಲಾಗಿದ್ದು ಮತ್ತು ಕಂಪನಿಯ ಹಣದ ಸಂಕೇತವಾಗಿರುತ್ತದೆ ಮತ್ತು ಎಲ್ಲಾ ಮೊತ್ತಗಳನ್ನು ಸೂಚಿಸಿದ ಮೊತ್ತಗಳನ್ನು ಹೊರತುಪಡಿಸಿ ಉಳದ ಎಲ್ಲಾ ಮೊತ್ತಗಳನ್ನು ಅತೀ ಸಮೀಪದ ಲಕ್ಷ ರೂ.ಗಳಲ್ಲಿ ನಿಷ್ಕರ್ಷಿಸಲಾಗಿದೆ.

**3) ಅಂದಾಜುಗಳ ಬಳಕೆ ಮತ್ತು ತೀರ್ಮಾನಗಳು:**

ಹಣಕಾಸು ಹೇಳಿಕೆಗಳನ್ನು ಇಂಡ್ ಎಎಸ್ ರೀತ್ಯ ತಯಾರಿಸುವಲ್ಲಿ ಕೆಲವೊಂದು ಅಂದಾಜುಗಳು, ತೀರ್ಮಾನಗಳು ಮತ್ತು ಊಹೆಗಳ ನಿರ್ದಾರಗಳನ್ನು ಮಾಡಬೇಕಾಗಿರುತ್ತದೆ. ಈ ಅಂದಾಜುಗಳು, ತೀರ್ಮಾನಗಳು ಮತ್ತು ಊಹೆಗಳನ್ನು ಲೆಕ್ಕ ಶಾಸ್ತ್ರ ನೀತಿಗಳನ್ನು ಅಳವಡಿಸಿ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು, ಹೊಣೆಗಾರಿಕೆಗಳನ್ನು ಹಣಕಾಸು ಹೇಳಿಕೆಗಳ ದಿನಾಂಕದಲ್ಲಿ ವರದಿಮಾಡುವಲ್ಲಿ ಆ ಅವಧಿಯ ಆದಾಯ ಮತ್ತು ವೆಚ್ಚಗಳಲ್ಲಿ ವರದಿಮಾಡುವಲ್ಲಿ ಪರಿಣಾಮ ಬೀರುತ್ತವೆ. ಲೆಕ್ಕ ಶಾಸ್ತ್ರ ಅಂದಾಜುಗಳು ಕಾಲಕಾಲಕ್ಕೆ ಬದಲಾಗಬಹುದು. ವಾಸ್ತವ ಪರಿಣಾಮಗಳು ಅಂದಾಜುಗಳಿಗೆ ವ್ಯತ್ಯಾಸ ಹೊಂದಿರುತ್ತವೆ. ಅಂದಾಜುಗಳಲ್ಲಿ ಸೂಕ್ತ ವ್ಯತ್ಯಾಸಗಳನ್ನು ಬದಲಾವಣೆಗೆ ಹೊಂದಿಕೊಂಡಂತೆ ಮಾಡಲು ತಿಳುವಳಿಕೆ ಇರಬೇಕಾಗಿರುತ್ತದೆ. ಅಂದಾಜುಗಳ ಬದಲಾವಣೆಯು ಹಣಕಾಸು ವಿವರಣೆಗಳಲ್ಲಿ ಸಂಬಂಧಿಸಿದ ಅವಧಿಗೆ ಪ್ರತಿಬಿಂಬಿಸುತ್ತವೆ. ಇದಕ್ಕೆ ಸಂಬಂಧಪಟ್ಟ ವಿವರಣೆಗಳನ್ನು ಹಣಕಾಸು ಹೇಳಿಕೆಗಳ ಟಿಪ್ಪಣಿಗಳಲ್ಲಿ ಪ್ರಾಮುಖ್ಯತೆ ಮೇರೆಗೆ ತಿಳಿಸಲಾಗುತ್ತದೆ.

**4) ಲೆಕ್ಕಶಾಸ್ತ್ರದ ನಿರ್ಣಾಯಕ ಅಂದಾಜುಗಳು:**

**ಅ) ಆಸ್ತಿ, ಯಂತ್ರಸಾಮಗ್ರಿ ಮತ್ತು ಉಪಕರಣಗಳು**

ಕಂಪನಿಯ ಆಸ್ತಿ ಮೌಲ್ಯಗಳಲ್ಲಿ ಆಸ್ತಿ ಯಂತ್ರ ಸಾಮಗ್ರಿ ಮತ್ತು ಉಪಕರಣಗಳ ಮೌಲ್ಯವು ಗಮನಾರ್ಹವಾಗಿರುತ್ತದೆ. ಆಸ್ತಿಯ ಅಂದಾಜು ಬಳಕೆಯ ಅವದಿ ಮತ್ತು ಉಳದ ಮೌಲ್ಯದ ಮೇಲೆ ನಿರ್ದರಿಸಿ ಕಾಲಕಾಲದ ಸವಕಳಿಯನ್ನು ನಿರ್ದರಿಸಲಾಗುತ್ತದೆ. ಆಸ್ತಿಗಳ ಅಂದಾಜು ಬಳಕೆ ಅವಧಿ ಮತ್ತು ಉಳಕೆ ಮೌಲ್ಯವನ್ನು ಕಂಪನಿಯು ಆ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ನಿರ್ದರಿಸುತ್ತದೆ ಮತ್ತು ಇದನ್ನು ವರ್ಷಾಂತ್ಯಕ್ಕೆ ಸೇರಿದಂತೆ ಕಾಲಕಾಲಕ್ಕೆ ಪರಮಾರ್ಷಿಸುತ್ತದೆ. ಆಸ್ತಿಯ ಅಂದಾಜು ಬಳಕೆಯ ಅವದಿಯು ಚಾರಿತ್ರಿಕ ಅನುಭವ ಮತ್ತು ಅದೇ ರೀತಿಯ ಆಸ್ತಿಗಳ ಮತ್ತು ಮುಂದಾಗಬಹುದಾದ ಘಟನೆಗಳು ಅವದಿಯಮೇಲಾಗುವ ಪರಿಣಾಮಗಳನ್ನು ಗಣನೆಗೆ ತೆಗೆದುಕೊಂಡಿರುತ್ತದೆ.

ಆ) **ತೆರಿಗೆಗಳು:**

ಅದಾಯ ತೆರಿಗೆಯ ಹವಣಿಕೆಯನ್ನು ನಿರ್ದರಿಸುವಲ್ಲಿ ಗುರುತರವಾದ ತೀರ್ಮಾನಗಳನ್ನು ತೆಗೆದುಕೊಳ್ಳುವಲ್ಲಿ, ಅನಿಶ್ಚಿತ ತೆರಿಗೆ ಪಾವತಿ ಮತ್ತು ವಸೂಲಾತಿಗಳನ್ನು ಗಣನೆಗೆ ತೆಗೆದುಕೊಂಡಿರುತ್ತದೆ.

**5)ಜಾಗತಿಕ ಸಾಂಕ್ರಾಮಿಕ ರೋಗ ಕೋವಿಡ್-19 ಗೆ ಸಂಭವಿಸಿದ ಅನಿಶ್ಚಿತತೆಗಳ ಅಂದಾಜು**

ಕೊವಿಡ್-19ಗೆ ಸಂಬಂಧಿಸಿದ ಸಾಂಕ್ರಾಮಿಕದಿಂದ ಉಂಟಾಗುವ ಸಂಭವನೀಯ ಪರಿಣಾಮಗಳನ್ನು ಕಂಪನಿಯು ಪರಿಗಣಿಸಿದೆ. ಈ ಸಾಂಕ್ರಾಮಿಕ ರೋಗದಿಂದಾಗಿ ಜಾಗತಿಕ ಆರ್ಥಿಕ ಪರಿಸ್ಥಿತಿಗಳಲ್ಲಿ ಸಂಭವನೀಯ ಭವಿಷ್ಯದ ಅನಿಶ್ಚಿತತೆಗಳಿಗೆ ಸಂಬಂಧಿಸಿದ ಊಹೆಗಳನ್ನು ಅಭಿವೃದ್ಧಿಪಡಿಸುವಲ್ಲಿ ಕಂಪನಿಯು ಈ ಹಣಕಾಸು ಲೆಕ್ಕ ಪತ್ರಗಳನ್ನು ಅನಮೋದಿಸಿದ ದಿನಾಂಕದಂದು ಆಂತರಿಕ ಮತ್ತು ಬಾಹ್ಯ ಮಾಹಿತಿಯ ಮೂಲಗಳನ್ನು ಬಳಸಿದೆ. ಕಂಪನಿಯು ಮಾಡಿದ ಊಹೆಗಳು ಮತ್ತು ಅಂದಾಜುಗಳ ಆಧಾರದ ಮೇಲೆ, ಆಸ್ತಿಗಳ ನಿವ್ವಳ ಬಾಕಿಯನ್ನು ಹಿಂಪಡೆಯಲಾಗುತ್ತದೆ.

**(6) ಕರ್ನಾಟಕ ಸರ್ಕಾರಕ್ಕೆ ಪಾವತಿಸಲಾದ ಸವಲತ್ತು ಶುಲ್ಕ**

ಕರ್ನಾಟಕ ಸರ್ಕಾರ (GOK), ಆಯಾ ಅಬಕಾರಿ ವರ್ಷಕ್ಕೆ (ಅ.ವ.) ಸವಲತ್ತು ಶುಲ್ಕವನ್ನು ನಿಗದಿಪಡಿಸಿ ಆದೇಶವನ್ನು ಹೊರಡಿಸುತ್ತದೆ. ನಿಗಮವು ಅ.ವ. :2019-20 ರವರೆಗೆ ₹1200.00 ಲಕ್ಷಗಳನ್ನು ಸವಲತ್ತು ಶುಲ್ಕವಾಗಿ ಪಾವತಿಸುತ್ತಿತ್ತು. ಅಧೀನ ಕಾರ್ಯದರ್ಶಿ, ಹಣಕಾಸು ಇಲಾಖೆ (ಅಬಕಾರಿ) ರವರಿಂದ ಸ್ವೀಕರಿಸಿದ ಸರ್ಕಾರದ ಆದೇಶ ಸಂಖ್ಯೆ : FD/ 30/ ಇಎಎ/2021 ಬೆಂಗಳೂರು, ದಿನಾಂಕ 26.02.2021 ರ ಪ್ರಕಾರ ಅ.ವ. 2020-21 ರಿಂದ ಸವಲತ್ತು ಶುಲ್ಕವನ್ನು ₹1800.00 ಲಕ್ಷಗಳಿಗೆ ಪರಿಷ್ಕರಿಸಲಾಗಿದೆ. ಹ.ವ. 2020-21 ರ ಅವಧಿಯಲ್ಲಿ, ಏಪ್ರಿಲ್-2020 ರಿಂದ ಜೂನ್-2020 ರವರೆಗಿನ ಅವಧಿಗೆ ₹300.00 ಲಕ್ಷಗಳನ್ನು ಮತ್ತು ಜುಲೈ-2020 ರಿಂದ ಮಾರ್ಚ್-2021 ರವರೆಗಿನ ಅವಧಿಗೆ ₹1350.00 ಲಕ್ಷಗಳನ್ನು ಪಾವತಿಸಲಾಗಿದೆ, ಇದರ ಅನ್ವಯ ಒಟ್ಟು ಮೊತ್ತ ₹1650.00 ಲಕ್ಷಗಳನ್ನು ಪಾವತಿಸಲಾಗಿದೆ.

# ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ

## ಹಣಕಾಸು ಹೇಳಿಕೆಗಳ ಬಾಗವಾಗಿರುವ ಟಿಪ್ಪಣಿಗಳು

**ಟಿಪ್ಪಣಿ1: ಆಸ್ತಿ, ಯಂತ್ರ ಸಾಮಗ್ರಿ & ಉಪಕರಣಗಳು ಮತ್ತು ಅಮೂರ್ತ ಆಸ್ತಿಗಳು**

ಆಸ್ತಿ, ಯಂತ್ರ ಸಾಮಗ್ರಿ ಮತ್ತು ಉಪಕರಣಗಳ ಹಾಗೂ ಅಮೂರ್ತ ಸ್ವತ್ತುಗಳು ಪ್ರಾರಂಭದಲ್ಲಿ ಮೂಲ ವೆಚ್ಚದಲ್ಲಿ ಗುರುತಿಸಿ ನಂತರ ಮೂಲ ವೆಚ್ಚಗಳಿಗೆ ಸಂಗ್ರಹವಾದ ಸವಕಳಿ ಮತ್ತು ಇಳಿತ ಯಾವುದಾದರೂ ಇದ್ದರೆ, ಕಡಿತಗೊಳಿಸಿ ಗುರುತಿಸಲಾಗುತ್ತದೆ. ಆಡಳಿತ ಮಂಡಳಿ ನಿರ್ದಾರಗಳಿಗೆ ಅನುಗುಣವಾಗಿ ಆಸ್ತಿ, ಸಾಮಗ್ರಿ ಮತ್ತು ಉಪಕರಣಗಳು ಬಳಕೆಗೆ ಸಿದ್ಧವಾಗುವವರೆಗೆ ಸ್ವಾಧೀನಕ್ಕೆ ನೇರವಾಗಿ ಕಾರಣವಾಗುವ ವೆಚ್ಚಗಳನ್ನು ಬಂಡವಾಳೀಕರಣಗೊಳಿಸಬಹುದಾಗಿರುತ್ತದೆ. ಈ ವೆಚ್ಚಗಳು ಸರಕು ಸಾಗಣೆ, ಅಬಕಾರಿ ಸುಂಕ, ತೆರಿಗೆಗಳು ಮತ್ತು ಸ್ಥಾಪನಾ ಶುಲ್ಕಗಳನ್ನು ಒಳಗೊಂಡಿರುತ್ತದೆ. ಗುತ್ತಿಗೆ ಆಧಾರ ಅಭಿವೃದ್ಧಿಗಳನ್ನು, ಸಂಗ್ರಹವಾದ ಸವಕಳಿಯನ್ನು/ಕಂತು ತೀರುವಳಿಯನ್ನು ಮೂಲ ವೆಚ್ಚದಿಂದ ಕಳೆದು ಹೇಳಲಾಗುತ್ತದೆ.

**ಸವಕಳಿ**

ನೇರ–ರೇಖೆಯ ವಿಧಾನವನ್ನು ಬಳಸಿಕೊಂಡು ಕಂಪನಿಯು ಆಸ್ತಿ, ಯಂತ್ರ ಸಾಮಗ್ರಿ ಮತ್ತು ಉಪಕರಣಗಳ ಅಂದಾಜು ಉಪಯುಕ್ತ ಜೀವನದ ಮೇಲೆ ಸವಕಳಿ ನಿಗದಿ ಮಾಡುತ್ತದೆ. ಅಮೂರ್ತ ಆಸ್ತಿ (ಗಣಕ ಯಂತ್ರ ತಂತ್ರಾಂಶವನ್ನು) ಮೂರು ವರ್ಷಗಳ ಅವಧಿಗೆ ಆಸ್ತಿಯ ಅಂದಾಜು ಉಪಯುಕ್ತ ಜೀವನ ಎಂದು ಪರಿಗಣಿಸಲಾಗಿದೆ. ಕೇಂದ್ರ ಕಛೇರಿಗೆ ಸಂಬಂಧಿಸಿದಂತೆ ಗುತ್ತಿಗೆ ಸುಧಾರಣೆಗಳನ್ನು ಮೂರು ವರ್ಷಗಳ ಅವಧಿಗೆ ಅಮಾರಟೈಸ್ ಮಾಡಲಾಗುತ್ತದೆ. ಆದಾಗ್ಯೂ, ಡಿಪೋಗಳಲ್ಲಿ ನಿರ್ಮಿಸಲಾದ ವಿಭಾಗಗಳು / ಕ್ಯೂಬಿಕಲ್‌ಗಳನ್ನು ಪೀಠೋಪಕರಣಗಳೆಂದು ಪರಿಗಣಿಸಿ, ಅದಕ್ಕೆ ಅನುಗುಣವಾಗಿ ಸವಕಳಿ ಮಾಡಲಾಗುತ್ತದೆ. ಸೇರ್ಪಡೆಗಳಿಗೆ ಸಂಬಂಧಿಸಿದಂತೆ ಸವಕಳಿಯನ್ನು ಅದರ ಸೇರ್ಪಡೆ ದಿನಾಂಕದಿಂದ ಪ್ರಮಾಣಾನುಗುಣವಾಗಿ ವಿಧಿಸಲಾಗುತ್ತದೆ ಮತ್ತು ಕಳೆಯುವಿಕೆ ಸಂಬಂಧಿಸಿದಂತೆ ಅದನ್ನು ಕಳೆಯುವವರೆಗೆ ವಿಧಿಸಲಾಗುತ್ತದೆ.

"ಪ್ರತಿ ಹಣಕಾಸು ವರ್ಷದ ಅಂತ್ಯಕ್ಕೆ ಆಸ್ತಿ ಪ್ರಕಾರ, ಸವಕಳಿ ವಿಧಾನ, ಉಪಯುಕ್ತ ಜೀವನವನ್ನು ಕಾಲಕಾಲಕ್ಕೆ ಪರಿಶೀಲಿಸಲಾಗುತ್ತದೆ. ಕಂಪನಿಗಳ ಕಾಯ್ದೆ, 2013 ರ ಮಾರ್ಗಸೂಚಿಗಳ ಪ್ರಕಾರ, ಮೂಲ ವೆಚ್ಚದ ಶೇ.5ರ ದರದಲ್ಲಿ ಬಾಕಿ ಮೌಲ್ಯವನ್ನು ಲೆಕ್ಕಾಚಾರ ಮಾಡಲಾಗುತ್ತದೆ. ಪ್ರಮುಖ ಆಸ್ತಿ, ಯಂತ್ರ ಸಾಮಗ್ರಿ ಮತ್ತು ಉಪಕರಣಗಳ ಉಪಯುಕ್ತ ಜೀವನಗಳು ಈ ಕೆಳಗಿನಂತಿವೆ.

| ಸ್ವತ್ತುಗಳ ಬಗೆ | ಉಪಯುಕ್ತ ವರ್ಷಗಳು |
|---|---|
| ಕಟ್ಟಡ –ಶೀಟ್ ಮೇಲ್ಛಾವಣಿ | 30 ವರ್ಷಗಳು |
| ಕಟ್ಟಡ –ಆರ್ ಸಿ ಸಿ ಮೇಲ್ಛಾವಣಿ | 60 ವರ್ಷಗಳು |
| ಗಣಕ ಯಂತ್ರ ಉಪಕರಣಗಳು | 3 ರಿಂದ 6 ವರ್ಷಗಳು |
| ವಿದ್ಯುತ್ ಸ್ಥಾಪನೆ ಮತ್ತು ಉಪಕರಣಗಳು | 10 ವರ್ಷಗಳು |
| ಕಛೇರಿ ಉಪಕರಣಗಳು | 5 ವರ್ಷಗಳು |
| ವಾಹನಗಳು | 8 ವರ್ಷಗಳು |
| ಪೀಠೋಪಕರಣಗಳು ಮತ್ತು ಅಳವಡಿಕೆಗಳು | 10 ವರ್ಷಗಳು |
| ಅಗ್ನಿ ಶಾಮಕ ಉಪಕರಣಗಳು | 10 ವರ್ಷಗಳು |
| ಸರಕು ಸಾಮಗ್ರಿ ಉಪಕರಣಗಳು | 5 ವರ್ಷಗಳು |
| ಗಣಕ ಯಂತ್ರ ತತ್ರಾಂಶ | 3 ವರ್ಷಗಳು |

ಆಸ್ತಿ, ಯಂತ್ರ ಸಾಮಗ್ರಿ ಮತ್ತು ಉಪಕರಣಗಳು ಮತ್ತು ಅಮೂರ್ತ ಸ್ವತ್ತುಗಳ ನಂತರದ ಖರ್ಚುಗಳಿಗೆ ಸಂಬಂಧಿಸಿದಂತೆ, ಭವಿಷ್ಯದ ಆರ್ಥಿಕ ಲಾಭಗಳು ಕಂಪನಿಗೆ ಬರುವಂತಿದ್ದರೆ ಅವುಗಳನ್ನು ವಿಶ್ವಾಸಾರ್ಹವಾಗಿ ಅಳೆಯುವ ರೀತಿಯಲ್ಲಿ ಕಂಡಲ್ಲಿ ಅದನ್ನು ಬಂಡವಾಳೀಕರಿಸಲಾಗುತ್ತದೆ. ರಿಪೇರಿ ಮತ್ತು ನಿರ್ವಹಣಾ ವೆಚ್ಚಗಳು ಖರ್ಚಾದಾಗ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾಗುತ್ತದೆ. ಆಸ್ತಿ ಮಾರಾಟದ ನಂತರದ ಬರುವ ಮೊತ್ತವನ್ನು ಸಂಬಂಧಿತ ಸಂಗ್ರಹವಾದ ಸವಕಳಿಗಳನ್ನು ಹಣಕಾಸು ಹೇಳಿಕೆಗಳಿಂದ ತೆಗೆಯಲಾಗುತ್ತದೆ ಮತ್ತು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಫಲಿತಾಂಶದ ಲಾಭಗಳು ಅಥವಾ ನಷ್ಟಗಳನ್ನು ಗುರುತಿಸಲಾಗುತ್ತದೆ.

**ದುರ್ಬಲತೆ (ಇಂಪೇರ್‌ಮೆಂಟ್)**

ಆಸ್ತಿ, ಯಂತ್ರ, ಸಾಮಗ್ರಿ ಮತ್ತು ಉಪಕರಣಗಳನ್ನು, ಘಟನೆಗಳು ಅಥವಾ ಸನ್ನಿವೇಶಗಳ ಪರಿಣಾಮವಾಗಿ ಅಂತಹ ಆಸ್ತಿಗಳ ಮುಂದುವರಿಸುವ ಮೊತ್ತವನ್ನು ಹಿಂಪಡೆಯಬಹುದೆ ಎಂಬುದನ್ನು ಗಣನೆಗೆ ತೆಗುದುಕೊಂಡು ಅವುಗಳ ಮೊತ್ತ ಹಿಂಪಡೆಯುವಿಕೆಯನ್ನು ವಿಮರ್ಶಿಸಲಾಗುತ್ತದೆ. ಇಂಪೇರ್‌ಮೆಂಟ್ ಸಲುವಾಗಿ, ಇತರೆ ಆಸ್ತಿಗಳಿಗೆ ಬೇರೆಯಾಗಿದ್ದು ಸ್ವತಂತ್ರವಾಗಿರುವ ಮತ್ತು ನಗದು ಹರಿವನ್ನು ನೀಡದ ಆಸ್ತಿಗಳನ್ನು ಹೊರತುಪಡಿಸಿ, ಪ್ರತಿ ಆಸ್ತಿಗಳನ್ನು ಪ್ರತ್ಯೇಕವಾಗಿ ಹಿಂಪಡೆಯಬಹುದಾದ ಮೊತ್ತವನ್ನು (ಅಂದರೆ ಫೇರ್ ವ್ಯಾಲ್ಯುನಿಂದ ಮಾರಾಟ ಬೆಲೆ ಮತ್ತು ಬಳಕೆ ಮೌಲ್ಯ ಕಳೆದು) ನಿರ್ದರಿಸಲಾಗುತ್ತದೆ. ಅಂತಹ ಸನ್ನಿವೇಶದಲ್ಲಿ ಹಿಂಪಡೆಯುವ ಮೊತ್ತವನ್ನು ಆ ಆಸ್ತಿಯ ಗುಂಪಿಗೆ ಸೇರಿದ ನಗದು ಉತ್ಪಾಧನಾ ಘಟಕ (CGU) ದೊಂದಿಗೆ ನಿರ್ದರಿಸಲಾಗುತ್ತದೆ. ಅಂತಹ ಆಸ್ತಿಗಳನ್ನು **ದುರ್ಬಲ (ಇಂಪೇರ್‌ಮೆಂಟ್)** ಎಂದು ನಿರ್ಧರಿಸಿದರೆ, (ಮುಂದುವರಿಸುವ ಮೊತ್ತವು ಹಿಂಪಡೆಯವ ಮೊತ್ತಕ್ಕಿಂತ ಹೆಚ್ಚಾಗಿದ್ದು) ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಗುರುತಿಸಲಾಗುತ್ತದೆ. ಇಂಪೇರ್‌ಮೆಂಟ್ ನಷ್ಟವನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಹಿಂಪಡೆಯುವ ಮೊತ್ತ ನಿರ್ಧರಿಸುವ ಅಂದಾಜುಗಳಲ್ಲಿ ಬದಲಾವಣೆಗಳಾಗಿದ್ದರೆ, ರಿವರ್ಸ ಮಾಡಲಾಗುತ್ತದೆ. ಈ ಮೊತ್ತಗಳು ಮುಂದುವರಿಸುವ ಮೊತ್ತಗಳಿಗಿಂತ ಹೆಚ್ಚಾಗಿದ್ದರೆ, ಹಿಂದಿನ ವರ್ಷಗಳಲ್ಲಿ ಇಂಪೇರ್‌ಮೆಂಟ್ ನಷ್ಟವನ್ನು ಗುರುತಿಸಿಲ್ಲದಿದ್ದರೆ (ಸಂಗ್ರಹವಾದ ಸವಕಳಿ ಕಳೆದು ನಿವ್ವಳ) ಆಸ್ತಿಗಳ ಮುಂದುವರಿಸುವ ಮೊತ್ತವನ್ನು ಪರಿಷ್ಕೃತ ಹಿಂಪಡೆಯುವ ಮೊತ್ತಗಳಿಗೆ ಏರಿಸಲಾಗುತ್ತದೆ.

## ಮಾರ್ಚ್ 31, 2020ಕ್ಕೆ ಅಂತ್ಯಗೊಂಡ ವರ್ಷದ ಆಸ್ತಿ, ಯಂತ್ರ ಮತ್ತು ಉಪಕರಣಗಳ ನಿವ್ವಳ ಮೌಲ್ಯದಲ್ಲಿನ ಬದಲಾವಣೆಗಳು ಈ ಕೆಳಕಂಡಂತಿವೆ:

## ಟಿಪ್ಪಣಿ 1 : ಆಸ್ತಿ, ಯಂತ್ರ ಸಾಮಗ್ರಿ ಮತ್ತು ಉಪಕರಣಗಳು

(₹ ಲಕ್ಷಗಳಲ್ಲಿ)

| ವಿವರಗಳು | ವೆಚ್ಚ ಅಥವಾ ಪರಿಗಣಿಸಲಾದ ವೆಚ್ಚ | | | | ಸಂಚಿತ ಸವಕಳಿ | | | | ಮುಂದುವರೆಸಲಾದ ಮೌಲ್ಯ | |
|---|---|---|---|---|---|---|---|---|---|---|
| | ವರ್ಷದ ಪ್ರಾರಂಭ 01.04.2019ಕ್ಕೆ | ವರ್ಷದ ಸೇರ್ಪಡೆ | ವರ್ಷದಿಂದ ತೆಗೆದಿರುವುದು/ಮರು-ವರ್ಗೀಕರಣ ಮತ್ತು ಹೊಂದಾಣಿಕೆಯಾಗಿರುವುದು | ವರ್ಷದ ಅಂತ್ಯ 31.03.2020ಕ್ಕೆ | ವರ್ಷದ ಪ್ರಾರಂಭ 01.04.2019ಕ್ಕೆ | ವರ್ಷದ ಸೇರ್ಪಡೆ | ಪ್ರಸ್ತುತ ವರ್ಷದಿಂದ ತೆಗೆದಿರುವುದು/ಮರು-ವರ್ಗೀಕರಣ ಮತ್ತು ಹೊಂದಾಣಿಕೆ ಯಾಗಿರುವುದು | ವರ್ಷದ ಅಂತ್ಯ 31.03.2020ಕ್ಕೆ | ವರ್ಷದ ಅಂತ್ಯ 31.03.2020ಕ್ಕೆ | ವರ್ಷದ ಪ್ರಾರಂಭ 01.04.2019ಕ್ಕೆ |
| ಭೂಮಿ | | | | | | | | | | |
| ಅ) ಸ್ವಂತದ್ದು | 2,255.68 | 0.28 | - | 2,255.96 | - | - | - | - | 2,255.96 | 2,255.68 |
| ಆ) ಗುತ್ತಿಗೆ ಸಹಿತ | 727.75 | 2.33 | - | 730.07 | - | - | - | - | 730.07 | 727.75 |
| ಕಟ್ಟಡ | 118.32 | 3,504.20 | - | 3,622.52 | 29.32 | 61.65 | - | 90.97 | 3,531.55 | 89.00 |
| ಪೀಠೋಪಕರಣ ಮತ್ತು ಅಳವಡಿಕೆ | 569.92 | 190.27 | 117.76 | 642.42 | 322.93 | 53.83 | 117.76 | 259.00 | 383.42 | 246.99 |
| ವಾಹನಗಳು | 115.96 | - | - | 115.96 | 69.57 | 10.14 | - | 79.72 | 36.24 | 46.38 |
| ಕಛೇರಿ ಸಾಮಗ್ರಿಗಳು | 428.68 | 20.94 | 46.30 | 403.33 | 324.52 | 29.39 | 45.64 | 308.28 | 95.05 | 104.16 |
| ಗಣಕಯಂತ್ರ ಸಾಮಗ್ರಿ | 1,305.08 | 22.92 | 498.81 | 829.19 | 921.00 | 147.47 | 496.59 | 571.88 | 257.31 | 384.07 |
| ವಿದ್ಯುತ್ ಅಳವಡಿಕೆ ಮತ್ತು ಉಪಕರಣಗಳು | - | 164.77 | - | 164.77 | - | 10.88 | | 10.88 | 153.89 | - |
| ಅಗ್ನಿ ಶಾಮಕ ಸಾಮಗ್ರಿ | 41.73 | 0.46 | 0.41 | 41.77 | 13.36 | 3.97 | 0.41 | 16.92 | 24.85 | 28.37 |
| ಸರಕು ಸಾಮಗ್ರಿ ಸಾಗಾಣಿಕೆ ಉಪಕರಣಗಳು | 184.65 | - | 65.08 | 119.58 | 131.98 | 15.81 | 64.97 | 82.82 | 36.75 | 52.67 |
| ಗುತ್ತಿಗೆ ಆಧಾರದ ಅಭಿವೃದ್ಧಿಗಳು | 170.81 | - | - | 170.81 | 162.27 | - | - | 162.27 | 8.54 | 8.54 |
| **ಉಪ ಮೊತ್ತ** | **5,918.58** | **3,906.17** | **728.36** | **9,096.39** | **1,974.96** | **333.15** | **725.37** | **1,582.73** | **7,513.65** | **3,943.62** |
| **ಅಮೂರ್ತ ಆಸ್ತಿಗಳು** | | | | | | | | | | |
| ಗಣಕಯಂತ್ರ ತಂತ್ರಾಂಶ | 214.51 | 6.04 | 184.68 | 35.88 | 189.86 | 18.89 | 184.68 | 24.07 | 11.81 | 24.65 |
| **ಉಪ ಮೊತ್ತ** | **214.51** | **6.04** | **184.68** | **35.88** | **189.86** | **18.89** | **184.68** | **24.07** | **11.81** | **24.65** |
| **ಒಟ್ಟು** | **6,133.09** | **3,912.21** | **913.04** | **9,132.27** | **2,164.82** | **352.04** | **910.05** | **1,606.81** | **7,525.46** | **3,968.27** |
| **ಹಿಂದಿನ ವರ್ಷದ ಮೊತ್ತ** | **5,789.00** | **402.75** | **58.65** | **6,133.09** | **1,931.58** | **291.12** | **57.89** | **2,164.81** | **3,968.27** | **3,857.40** |

## ಮಾರ್ಚ್ 31, 2021ಕ್ಕೆ ಅಂತ್ಯಗೊಂಡ ವರ್ಷದ ಆಸ್ತಿ, ಯಂತ್ರ ಮತ್ತು ಉಪಕರಣಗಳ ನಿವ್ವಳ ಮೌಲ್ಯದಲ್ಲಿನ ಬದಲಾವಣೆಗಳು ಈ ಕೆಳಕಂಡಂತಿವೆ:

(₹ ಲಕ್ಷಗಳಲ್ಲಿ)

| ವಿವರಗಳು | ವೆಚ್ಚ ಅಥವಾ ಪರಿಗಣಿಸಲಾದ ವೆಚ್ಚ | | | | ಸಂಚಿತ ಸವಕಳಿ | | | | ಮುಂದುವರೆಸಲಾದ ಮೌಲ್ಯ | | |
|---|---|---|---|---|---|---|---|---|---|---|---|
| | ಪ್ರಸ್ತುತ ವರ್ಷದ ಪ್ರಾರಂಭ 01.04.2020ಕ್ಕೆ | ಪ್ರಸ್ತುತ ವರ್ಷದ ಸೇರ್ಪಡೆ | ಪ್ರಸ್ತುತ ವರ್ಷದಿಂದ ತೆಗೆದಿರುವುದು/ಮರು-ವರ್ಗೀಕರಣ ಮತ್ತು ಹೊಂದಾಣಿಕೆಯಾಗಿರುವುದು | ಪ್ರಸ್ತುತ ವರ್ಷದ ಅಂತ್ಯ 31.03.2021ಕ್ಕೆ | ಪ್ರಸ್ತುತ ವರ್ಷದ ಪ್ರಾರಂಭ 01.04.2020ಕ್ಕೆ | ಪ್ರಸ್ತುತ ವರ್ಷದ ಸೇರ್ಪಡೆ | ಪ್ರಸ್ತುತ ವರ್ಷದಿಂದ ತೆಗೆದಿರುವುದು/ಮರು-ವರ್ಗೀಕರಣ ಮತ್ತು ಹೊಂದಾಣಿಕೆ ಯಾಗಿರುವುದು | ಪ್ರಸ್ತುತ ವರ್ಷದ ಅಂತ್ಯ 31.03.2021ಕ್ಕೆ | ಪ್ರಸ್ತುತ ವರ್ಷದ ಅಂತ್ಯ 31.03.2021ಕ್ಕೆ | ಹಿಂದಿನ ವರ್ಷದ ಅಂತ್ಯ 31.03.2020ಕ್ಕೆ | ಹಿಂದಿನ ವರ್ಷದ ಪ್ರಾರಂಭ 01.04.2019ಕ್ಕೆ |
| ಭೂಮಿ | | | | | | | | | | | |
| ಅ) ಸ್ವಂತದ್ದು | 2,255.96 | 43.72 | - | 2,299.68 | - | - | - | - | 2,299.68 | 2,255.96 | 2,255.68 |
| ಆ) ಗುತ್ತಿಗೆ ಸಹಿತ | 730.07 | - | 7.58 | 722.49 | - | - | - | - | 722.49 | 730.07 | 727.75 |
| ಕಟ್ಟಡ | 3,622.52 | 3,696.46 | - | 7,318.98 | 90.97 | 183.61 | - | 274.58 | 7,044.40 | 3,531.55 | 89.00 |
| ಪೀಠೋಪಕರಣ ಮತ್ತು ಅಳವಡಿಕೆ | 642.42 | 42.42 | 0.31 | 684.53 | 259.00 | 58.28 | 0.30 | 316.99 | 367.55 | 383.42 | 246.99 |
| ವಾಹನಗಳು | 115.96 | 31.93 | 12.54 | 135.35 | 79.72 | 10.22 | 12.54 | 77.40 | 57.95 | 36.24 | 46.38 |
| ಕಛೇರಿ ಸಾಮಗ್ರಿಗಳು | 403.33 | 36.15 | 0.08 | 439.40 | 308.28 | 32.23 | 0.08 | 340.43 | 98.97 | 95.05 | 104.16 |
| ಗಣಕಯಂತ್ರ ಸಾಮಗ್ರಿ | 829.19 | 32.84 | 1.13 | 860.90 | 571.88 | 120.41 | 1.07 | 691.22 | 169.68 | 257.31 | 384.07 |
| ವಿದ್ಯುತ್ ಸ್ಥಾಪನೆ ಮತ್ತು ಉಪಕರಣಗಳು | 164.77 | 209.94 | 1.43 | 373.29 | 10.88 | 28.47 | - | 39.35 | 333.94 | 153.89 | - |
| ಅಗ್ನಿ ಶಾಮಕ ಸಾಮಗ್ರಿ | 41.77 | - | - | 41.77 | 16.92 | 3.98 | - | 20.90 | 20.88 | 24.85 | 28.37 |
| ಸರಕು ಸಾಮಗ್ರಿ ಸಾಗಾಣಿಕೆ ಯಂತ್ರ | 119.58 | 0.95 | - | 120.53 | 82.82 | 11.37 | - | 94.19 | 26.34 | 36.75 | 52.67 |
| ಗುತ್ತಿಗೆ ಆಧಾರದ ಅಭಿವೃದ್ಧಿಗಳು | 170.81 | 2.01 | - | 172.82 | 162.27 | 0.17 | - | 162.44 | 10.38 | 8.54 | 8.54 |
| **ಉಪ ಮೊತ್ತ** | **9,096.39** | **4,096.44** | **23.07** | **13,169.75** | **1,582.73** | **448.74** | **13.97** | **2,017.48** | **11,152.25** | **7,513.65** | **3,943.62** |
| **ಅಮೂರ್ತ ಆಸ್ತಿಗಳು** | | | | | | | | | | | |
| ಗಣಕಯಂತ್ರ ತಂತ್ರಾಂಶ | 35.88 | 12.27 | - | **48.15** | 24.07 | 10.86 | - | 34.94 | 13.21 | 11.81 | 24.65 |
| **ಉಪ ಮೊತ್ತ** | **35.88** | **12.27** | **-** | **48.15** | **24.07** | **10.86** | **-** | **34.94** | **13.21** | **11.81** | **24.65** |
| ಒಟ್ಟು | **9,132.27** | **4,108.71** | **23.07** | **13,217.90** | **1,606.81** | **459.61** | **13.97** | **2,052.42** | **11,165.46** | **7,525.46** | **3,968.27** |
| **ಹಿಂದಿನ ವರ್ಷದ ಮೊತ್ತ** | **6,133.09** | **3,912.21** | **913.04** | **9,132.27** | **2,164.82** | **352.04** | **910.05** | **1,606.81** | **7,525.46** | **3,968.27** | **3,857.41** |

**ಟಿಪ್ಪಣಿ – ಭೂಮಿ: ಸ್ವಂತದ್ದು / ಗುತ್ತಿಗೆ ಆದಾರದ್ದು.**

ನಿಗಮವು ರಾಜ್ಯಾದ್ಯಂತ ಡಿಪೋ ಕಟ್ಟಡಗಳ ನಿರ್ಮಾಣಕ್ಕಾಗಿ ಮುಕ್ತ ಹಿಡುವಳಿ ಮತ್ತು ಗುತ್ತಿಗೆ ಆಧಾರದ ಮೇಲೆ ಭೂಮಿಯನ್ನು ಖರೀದಿಸುತ್ತಿದೆ/ವಿವಿದ ಪ್ರಾಧಿಕಾರಗಳಿಂದ ಮಂಜೂರು ಮಾಡಿಕೊಳ್ಳುತ್ತಿದೆ. ಮುಕ್ತ ಹಿಡುವಳಿ ಭೂಮಿಯನ್ನು ಮಾರ್ಗಸೂಚಿ ಮೌಲ್ಯಕ್ಕಿಂತ ಕಡಿಮೆ ಬೆಲೆಗೆ ಕರ್ನಾಟಕ ಸರ್ಕಾರವು ಹಂಚಿಕೆ ಮಾಡಿದೆ ಮತ್ತು ಗುತ್ತಿಗೆ ಭೂಮಿಯನ್ನು ಲೀಸ್ ಕಮ್ ಸೇಲ್ ಆಧಾರದ ಮೇಲೆ ಮೆ॥ ಕೆ.ಎ.ಐ.ಡಿ.ಬಿ ರವರು ಹಂಚಿಕೆ ಮಾಡಿರುತ್ತಾರೆ, 31ನೇ ಮಾರ್ಚ್, 2021 ರಂತೆ ನಿವೇಶನದ ವಿವರಗಳು ಕೆಳಕಂಡಂತಿವೆ.

**(₹ ಲಕ್ಷಗಳಲ್ಲಿ)**

| ಕ್ರ.ಸಂ. | ಮಳಿಗೆಯ ಹೆಸರು | ಹಂಚಿಕೆ/ಸ್ವಾದೀನಗಳ ದಿನಾಂಕ | ಗುತ್ತಿಗೆ ಪಡೆದ ಆಸ್ತಿಯಾಗಿದ್ದಲ್ಲಿ ಗುತ್ತಿಗೆ ಅವಧಿ (ವರ್ಷಗಳು) | ಭೂಮಿ ಇರುವ ಸ್ಥಳ | ವಿಸ್ತಾರ: ಎಕರೆಗಳಲ್ಲಿ/ಚದರ ಮೀಟರ್ ಗಳಲ್ಲಿ | 31.03.2021 ಕ್ಕೆ ಭೂಮಿ ಮೌಲ್ಯ |
|---|---|---|---|---|---|---|
| **(ಅ): ಮುಕ್ತ ಹಿಡುವಳಿ ಭೂಮಿ (ಸ್ವಂತದ್ದು)** | | | | | | **₹ ಲಕ್ಷಗಳಲ್ಲಿ** |
| 1 | ಕೆ.ಜಿ.ಹಳ್ಳಿ (ಬೆಂಗಳೂರು) | 27.02.2007 | – | ಪಿ.ಐ.ಡಿ.ಸಂ:77/1,76,77 ಮತ್ತು 78.ಕಾಡುಗೊಂಡನಹಳ್ಳಿ.ವಾರ್ಡ–24, ಹೆಚ್.ಬಿ.ಆರ್.ಲೇ ಔಟ್,ಬೆಂಗಳೂರು. | 2.08 ಎಕರೆಗಳು | 1,110.48 |
| 2 | ಬ್ಯಾಟರಾಯನಪುರ (ಬೆಂಗಳೂರು) | 02.12.2006 | – | ಸರ್ವೆ ಸಂ.9,ಮೈಸೂರು ರಸ್ತೆ, ಬ್ಯಾಟರಾಯನಪುರ,ಬೆಂಗಳೂರು. | 0.91 ಎಕರೆಗಳು | 993.79 |
| 3 | ಸೋಗಾನೆ,ಭದ್ರಾವತಿ | 24.03.2017 | – | ಸರ್ವೆಸಂ.120,ಏರ್ ಪೋರ್ಟ ರಸ್ತೆ,ಸೋಗಾನೆ ಗ್ರಾಮ, ಭದ್ರಾವತಿ | 2.10 ಎಕರೆಗಳು | 12.89 |
| 4 | ಚಳ್ಳಕೆರೆ | 22.12.2020 | – | ಚಳ್ಳಕೆರೆ ತಾಲೂಕ್,ಚಿತ್ರದುರ್ಗ ಜಿಲ್ಲ | 2.00 ಎಕರೆಗಳು | 3.35 |
| 5 | ಚಿಕ್ಕಮಗಳೂರು | 29.11.2018 | – | ಸರ್ವೆ ಸಂ.535, ಹಿರೇಮಗಳೂರು, ಚಿಕ್ಕಮಗಳೂರು ಸಿಟಿ | 3.20 ಎಕರೆಗಳು | 24.92 |
| 6 | ಚಿತ್ರದುರ್ಗ | 31.05.2011 | – | ಗುಡ್ಡರಂಗವನಹಳ್ಳಿ,ಆರ್.ಎಸ್.ಎನ್.98,ಕಸಬ ಹೋಬಳಿ,ಚಿತ್ರದುರ್ಗ | 3.00 ಎಕರೆಗಳು | 2.74 |
| 7 | ಹಾವೇರಿ | 19.06.2010 | – | ಸರ್ವೆ ನಂ.83/2, ಯತ್ತಿನಹಳ್ಳಿ,ಹಾವೇರಿ | 3.00 ಎಕರೆಗಳು | 2.04 |
| 8 | ಹುಬ್ಬಳ್ಳಿ | 09.12.2016 | – | ಸರ್ವೆ ನಂ.155 ಮತ್ತು 156, ಬ್ಲಾಕ್ ನಂ.282ಎ/1, ಬೈರೇದೇವರಕೊಪ್ಪ, ಹುಬ್ಬಳ್ಳಿ | 4.00 ಎಕರೆಗಳು | 102.85 |
| 9 | ಕುಂದಾಪುರ | 30.09.2020 | – | ಸರ್ವೆ ನಂ.33/ಪಿ1, ಅಸೋದು ಗ್ರಾಮ, ಕುಂದಾಪುರ ತಾಲೂಕ, ಉಡುಪಿ ಜಿಲ್ಲ | 2.00 ಎಕರೆಗಳು | 8.42 |
| 10 | ಪುತ್ತೂರು | 08.01.2019 | – | ಸರ್ವೆ ನಂ.277/1/81, ನರಿಮೊಗರು ಗ್ರಾಮ, ಪುತ್ತೂರು ತಾಲೂಕ, ದ.ಕ.ಜಿಲ್ಲ | 1.50 ಎಕರೆಗಳು | 2.85 |
| 11 | ಸಾಗರ | 07.11.2014 | – | ಸರ್ವೆ ನಂ.16, (ಪೋಡಿ ಸರ್ವೆ ನಂ.67), ಸೊರಬ ರಸ್ತೆ, ಸಾಗರ,ಶಿವಮೊಗ್ಗ ಜಿಲ್ಲ | 2.20 ಎಕರೆಗಳು | 1.68 |
| 12 | ಶಿರಾ | 15.01.2021 | – | ಸರ್ವೆ ನಂ 87, ಕಲ್ಲುಕೋಟೆ ಗ್ರಾಮ, ಶಿರಾ ತಾಲೂಕ್, ತುಮಕೂರು ಜಿಲ್ಲ | 3.00 ಎಕರೆಗಳು | 25.68 |
| 13 | ಯಾದಗಿರಿ | 22.05.2018 | – | ಸರ್ವೆ ನಂ.671, ಯಾದಗಿರಿ (ಬಿ) ಗ್ರಾಮ, ಯಾದಗಿರಿ | 2.00 ಎಕರೆಗಳು | 8.00 |
| | | | | **ಒಟ್ಟು: (ಅ)** | | **2,299.68** |

**(ಆ) ಗುತ್ತಿಗೆ ಭೂಮಿ :**

| | | | | | | |
|---|---|---|---|---|---|---|
| 1 | ಹಾಸನ | 22.04.2010 | 10 | ಪ್ಲಾಟ್ ನಂ.1 ಬಿ1/ಪಿ1 ಮತ್ತು –2, ಹಾಸನ ಗ್ರೋತ್ ಸೆಂಟರ್, ಹಾಸನ | 14196 ಚದರ ಮೀಟರ್ | 58.15 |
| 2 | ಬೀದರ್ | 22.04.2010 | 10 | ಪ್ಲಾಟ್ ನ104–ಬಿಪಿ1,105–ಪಿ1, 106–ಪಿ1,107–ಬಿಪಿ1, ಕೊಲ್ಲಾರ ಕೈಗಾರಿಕಾ ಪ್ರದೇಶ, ಬೀದರ್ | 12137 ಚದರ ಮೀಟರ್ | 9.81 |
| 3 | ಕೂರ್ಗಳ್ಳಿ, ಮೈಸೂರು | 16.06.2011 | 10 | ಪ್ಲಾಟ್ ನಂ.28ಪಿ,ಸರ್ವೆ ನಂ.96, 3ನೇ ಫೇಸ್,ಕೂರ್ಗಳ್ಳಿ,ಮೈಸೂರು | 11336.5 ಚದರ ಮೀಟರ್ | 160.44 |
| 4 | ಗದಗ | 14.09.2010 | 10 | ಪ್ಲಾಟ್ ನಂ.54, ನರಸಾಪುರ ಕೈಗಾರಿಕಾ ಪ್ರದೇಶ, ಗದಗ | 12000 ಚದರ ಮೀಟರ್ | 31.28 |
| 5 | ವಿಜಯಪುರ | 17.01.2012 | 10 | ಪ್ಲಾಟ್ ನಂ.10, ಸರ್ವೆ ನಂ. 217, ಅಲಿಯಾಬಾದ್ ಕೈಗರಿಕಾ ಪ್ರದೇಶ, 1ನೇ ಬ್ಲಾಕ್, ವಿಜಯಪುರ | 8094 ಚದರ ಮೀಟರ್ | 16.80 |
| 6 | ಕಲಬುರ್ಗಿ | 20.09.2016 | 99 | ಪ್ಲಾಟ್ ನಂ.68,70 ಮತ್ತು 82, 2ನೇ ಫೇಸ್,ನಂದೂರ್ ಕೈಗಾರಿಕಾ ಪ್ರದೇಶ, ಕೆಸರಟಗಿ,ಕಲಬುರ್ಗಿ | 12008 ಚದರ ಮೀಟರ್ | 163.93 |
| 7 | ಶಿವಮೊಗ್ಗ | 09.12.2016 | 99 | ಪ್ಲಾಟ್ ನಂ.15,16,17 ಮತ್ತು 18, ದೇವಕತಿಕೊಪ್ಪ ಕೈಗಾರಿಕಾ ಪ್ರದೇಶ, ಶಿವಮೊಗ್ಗ | 12138 ಚದರ ಮೀಟರ್ | 209.93 |
| 8 | ಚಾಮರಾಜನಗರ | 08.03.2018 | 2 | ಪ್ಲಾಟ್ ನಂ.96, ಬದನಗುಪ್ಪೆ ಮತ್ತು ಕಲಬೇನಹಳ್ಳಿ ಕೈಗಾರಿಕಾ ಪ್ರದೇಶ,ಚಾಮರಾಜನಗರ ಜಿಲ್ಲ | 8091 ಚದರ ಮೀಟರ್ | 72.18 |
| | | | | **ಒಟ್ಟು: (ಆ)** | | **722.49** |
| | | | | **ಒಟ್ಟು: (ಅ) ಮತ್ತು (ಆ)** | | **3,022.18** |

**ಟಿಪ್ಪಣಿ:**

(ಅ) ಪುತ್ತೂರು ಮತ್ತು ಯಾದಗಿರಿಯಲ್ಲಿ ಗೋದಾಮುಗಳ ನಿರ್ಮಾಣಕ್ಕಾಗಿ ಹಂಚಿಕೆಮಾಡಿರುವ ಜಮೀನುಗಳು ಜಿಲ್ಲಾಡಳಿತದಿಂದ (G.O.K) ಮಂಜೂರು ಮಾಡಲಾದ ಮುಕ್ತ ಹಿಡುವಳಿ ಭೂಮಿಗಳಾಗಿವೆ. 2.00 ಎಕರೆ ಭೂಮಿ ಯಾದಗಿರಿಯಲ್ಲಿ 13.12.2017ರಂದು ಮತ್ತು 1.50 ಎಕರೆ ಭೂಮಿ 01-06-2019 ರಂದು ಪುತ್ತೂರಿನಲ್ಲಿ ಮಂಜೂರಾದ ಕಂದಾಯ ಜಮೀನುಗಳು ವಿವಾದದಲ್ಲಿವೆ. ಈ ಹಿನ್ನೆಲೆಯಲ್ಲಿ ನಿಗಮವು ಪರ್ಯಾಯ ಭೂಮಿಯನ್ನು ಮಂಜೂರು ಮಾಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತದೆ. ಈ ವಿಷಯವು ಸಂಬಂಧಪಟ್ಟ ಪ್ರಾಧಿಕಾರದ ಪರಿಗಣನೆಯಲ್ಲಿದೆ. ಪರ್ಯಾಯ ಭೂಮಿಯನ್ನು ಪಡೆಯಲು ನಿಗಮವು ಆಯಾ ಜಿಲ್ಲಾಡಳಿತದೊಂದಿಗೆ ನಿರಂತರ ಸಂಪರ್ಕದಲ್ಲಿದೆ.

(ಆ) ನಿವೇಶನದ ಮೊತ್ತದಡಿಯಲ್ಲಿ ಸೇರಿಸಲಾಗಿದ್ದ ಕಟ್ಟಡ ನಕ್ಷೆ ಅನುಮೋದನೆ ಶುಲ್ಕ ₹ 7,58,140/-ಗಳನ್ನು ಮೈಸೂರು-ಕೂರ್ಗಳ್ಳಿ ಡಿಪೊ ಕಟ್ಟಡದ ವೆಚ್ಚಕ್ಕೆ ಮರು-ವರ್ಗೀಕರಿಸಲಾಗಿದೆ.

**ಟಿಪ್ಪಣಿ 2: ಪ್ರಗತಿಯಲ್ಲಿರುವ ಕಟ್ಟಡ ಕಾಮಗಾರಿಗಳು**

ಆಸ್ತಿ, ಯಂತ್ರಸಾಮಗ್ರಿ ಮತ್ತು ಉಪಕರಣಗಳಿಗೆ ನೀಡಿರುವ ಮುಂಗಡಗಳು ಆಸ್ತಿ ಮತ್ತು ಹೊಣೆಗಳ ಪಟ್ಟಿಯ ದಿನಾಂಕದಂದು ಬಾಕಿ ಇರುವುದನ್ನು ಆಸ್ತಿ ಮುಂಗಡಗಳಾಗಿ "ಇತರೆ ಧೀರ್ಘಾವಧಿ ಆಸ್ತಿಗಳಲ್ಲಿ" ಗುರುತಿಸಲಾಗಿದೆ ಮತ್ತು ಅಂತಹ ದಿನಾಂಕದಂದು ಬಳಸಲು ಸಿದ್ಧವಿಲ್ಲದ ಆಸ್ತಿಗಳ ಮೊತ್ತವನ್ನು '**ಪ್ರಗತಿಯಲ್ಲಿರುವ ಕಟ್ಟಡ ಕಾಮಗಾರಿಗಳಲ್ಲಿ**' ತೋರಿಸಲಾಗಿದೆ.

(₹ ಲಕ್ಷಗಳಲ್ಲಿ)

| ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 1 ಎಪ್ರಿಲ್, 2019 ರಲ್ಲಿದ್ದಂತೆ |
|---|---|---|---|
| ನಿರ್ಮಾಣ ಹಂತದಲ್ಲಿರುವ ಕಟ್ಟಡಗಳು | 4,065.28 | 6,490.16 | 6,602.67 |
| **ಒಟ್ಟು** | **4,065.28** | **6,490.16** | **6,602.67** |

ಆರ್ಥಿಕ ವರ್ಷ: 2020-21 ಸಾಲಿನಲ್ಲಿ ಗೋದಾಮು ನಿರ್ಮಾಣದ ಪ್ರಗತಿಯ ವಿವರಗಳು ಕೆಳಕಂಡಂತಿವೆ.

(₹ ಲಕ್ಷಗಳಲ್ಲಿ)

| ಕ್ರ.ಸಂ. | ನಿರ್ಮಾಣ ಹಂತದಲ್ಲಿರುವ ಮಳಿಗೆಗಳು | 01.042020ರಂತೆ ಬಾಕಿ | ಪ್ರಸಕ್ತ ಸಾಲಿನ ಸೇರ್ಪಡೆ | ಚಾಲ್ತಿ ವರ್ಷದಲ್ಲಿ ಹೊಂದಾಣಿಕೆ/ ಬಂಡವಾಳೀಕರಣ | 31.03.2021ರಂತೆ ಬಾಕಿ |
|---|---|---|---|---|---|
| 1 | ಬೀದರ | 472.96 | 63.05 | (0.06) | 535.95 |
| 2 | ಬ್ಯಾಟರಾಯನಪುರ(ಹೆಚ್ಚುವರಿ ಕಾಮಗಾರಿ) | 0.33 | 36.95 | (0.33) | 36.95 |
| 3 | ಚಿಕ್ಕಮಗಳೂರು | 2.80 | 100.21 | (2.80) | 100.21 |
| 4 | ಚಿತ್ರದುರ್ಗ | 805.56 | 85.21 | (0.06) | 890.70 |
| 5 | ಗದಗ | 523.68 | 131.54 | (0.06) | 655.16 |
| 6 | ಹಾಸನ | 1,005.60 | 123.86 | 1,129.46 | - |
| 7 | ಹಾವೇರಿ | 205.36 | 411.83 | (5.36) | 611.83 |
| 8 | ಹುಬ್ಬಳ್ಳಿ-ಬೈರೇದೇವರಕೊಪ್ಪ | 1,210.10 | 12.75 | 1,222.85 | - |
| 9 | ಕೆ.ಜಿ.ಹಳ್ಳಿ (ಇಂಪೋರ್ಟೆಡ್) | 245.43 | 250.08 | (3.91) | 491.60 |
| 10 | ಮೈಸೂರು-ಕೂರ್ಗಳ್ಳಿ | 814.97 | 44.38 | 859.35 | - |
| 11 | ಶಿವಮೊಗ್ಗ-ದೇವತಿಕೊಪ್ಪ | 569.36 | 173.52 | - | 742.88 |
| 12 | ಶಿವಮೊಗ್ಗ-ಸೋಗಾನೆ | 634.01 | 57.03 | 691.04 | - |
| | **ಒಟ್ಟು** | **6,490.16** | **1,490.41** | **3,890.13** | **4,065.28** |

**ಬಂಡವಾಳ ಬದ್ಧತೆ:**

ಮೇಲಿನ ಕೋಷ್ಟಕದಲ್ಲಿ ತೋರಿಸಿರುವಂತೆ, 31 ನೇ ಮಾರ್ಚ್, 2021 ರಲ್ಲಿ, 8 ಡಿಪೋಗಳಿಗೆ ಸಂಬಂಧಿಸಿದಂತೆ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಗುತ್ತಿಗೆದಾರರಿಗೆ ವಹಿಸಲಾಗಿರುವ ಕೆಲಸದ ವಿವರಗಳು ಮತ್ತು ಬಂಡವಾಳದ ಬದ್ಧತೆ ಈ ಕೆಳಗಿನಂತಿದೆ:

(₹ ಲಕ್ಷಗಳಲ್ಲಿ)

| ಗುತ್ತಿಗೆದಾರರ ಹೆಸರು/ಮಳಿಗೆಗಳು | ಗುತ್ತಿಗೆದಾರರಿಗೆ ಪಾವತಿಸಿದ ಅಂದಾಜು ಮೊತ್ತ | ಇತರೆ ವೆಚ್ಚಗಳು | 31.03.2021ರ ವರೆಗೆ | ಗುತ್ತಿಗೆದಾರರಲ್ಲಿರುವ ಮುಂಗಡ | ಬಂಡವಾಳ ಬದ್ಧತೆಯ ಬಾಕಿ |
|---|---|---|---|---|---|
| **ಅ)ಕರ್ನಾಟಕ ಗೃಹ ಮಂಡಳ: (KHB)** 1)ಶಿವಮೊಗ್ಗ-ದೇವತಿಕೊಪ್ಪ | 725.96 | 46.94 | 742.87 | 3.28 | 26.75 |
| ಒಟ್ಟು(ಅ) | 725.96 | 46.94 | 742.87 | 3.28 | 26.75 |
| **ಆ)ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮ: (KRIDL)** | | | | | |
| 1) ಬೀದರ್ | 709.84 | 0.06 | 535.95 | 33.11 | 140.83 |
| 2) ಚಿತ್ರದುರ್ಗ | 940.26 | 0.06 | 890.70 | 11.99 | 37.62 |
| 3) ಗದಗ | 741.81 | 0.06 | 655.16 | 12.52 | 74.19 |
| **ಒಟ್ಟು(ಆ)** | **2,391.91** | **0.18** | **2,081.81** | **57.62** | **252.64** |
| ಬ) ಸ್ವತ: ಗುತ್ತಿಗೆದಾರ: | | | | | |
| 1) ಬ್ಯಾಟರಾಯನಪುರ-ಹೆಚ್ಚುವರಿ ಕಾಮಗಾರಿ | 74.11 | 1.18 | 36.95 | - | 38.33 |
| 2) ಚಿಕ್ಕಮಗಳೂರು | 729.42 | 14.85 | 100.21 | - | 644.06 |
| 3)ಹಾವೇರಿ | 684.23 | 12.50 | 611.83 | - | 84.91 |
| 4) ಕೆ.ಜಿ ಹಳ್ಳಿ (ಇಂಪೋರ್ಟೆಡ್) | 536.43 | 8.89 | 491.60 | - | 53.72 |
| **ಒಟ್ಟು(ಬ)** | **2,024.19** | **37.42** | **1,240.59** | **-** | **821.02** |
| **ಸಮಗ್ರ ಒಟ್ಟು(ಅ+ಆ+ಬ)** | **5,142.06** | **84.54** | **4,065.27** | **60.90** | **1,100.41** |

ಸೂಚನೆ: ಮೇಲೆ ತೋರಿಸಿರುವ ಇತರ ವೆಚ್ಚಗಳಲ್ಲಿ ಯೋಜನೆಯ ಮೇಲ್ವಿಚಾರಣೆಯ ಆಡಳಿತ ಶುಲ್ಕಗಳು, ಯೋಜನಾ ಅನುಮೋದನೆ ಶುಲ್ಕಗಳು ಇತ್ಯಾದಿಗಳನ್ನು ಒಳಗೊಂಡಿವೆ. 31.03.2020 ರವರೆಗಿನ ಬಂಡವಾಳದ ಹೊಣೆಗಾರಿಕೆ/ ಬದ್ಧತೆಯು ಟಿಪ್ಪಣಿ 31ರಲ್ಲಿ ನಮೂದಿಸಿದಂತೆ ₹ 1818.20 ಲಕ್ಷಗಳಷ್ಟಿದೆ.

**ಪೂರ್ಣಗೊಂಡ ಕಟ್ಟಡಗಳ ಬಂಡವಾಳೀಕರಣ**

31 ಮಾರ್ಚ್, 2021 ರವರೆಗೆ, 10 ಡಿಪೋ ಕಟ್ಟಡಗಳ ನಿರ್ಮಾಣವು ಪೂರ್ಣಗೊಂಡಿರುತ್ತದೆ ಮತ್ತು ಇವುಗಳನ್ನು ಹ.ವ: 2019-20 ಮತ್ತು 2020-21 ರಲ್ಲಿ ಮೂಲಸೌಕರ್ಯ ವಿಭಾಗವು ಸಲ್ಲಿಸಿದ ಪೂರ್ಣಗೊಳಿಸುವಿಕೆಯ ಪ್ರಮಾಣಪತ್ರದ ಆಧಾರದ ಮೇಲೆ ಬಂಡವಾಳೀಕರಣ ಗೊಳಿಸಲಾಗಿದೆ. ವಿವರಗಳು ಕೆಳಕಂಡಂತಿವೆ:

(₹ ಲಕ್ಷಗಳಲ್ಲಿ)

| ಡಿಪೋ ಹೆಸರು | ಬಳಕೆ ದಿನಾಂಕ | ಆಸ್ತಿ ಮತ್ತು ಮೊತ್ತದ ವರ್ಗೀಕರಣ | | | ಒಟ್ಟು ಮೊತ್ತ |
|---|---|---|---|---|---|
| | | ಕಟ್ಟಡ | ವಿದ್ಯುದೀಕರಣ | ಪೀಠೋಪಕರಣ ಮತ್ತು ಅಳವಡಿಕೆ | |
| **ಅ) ಆ.ವ.:2019-20** 1)ಚಾಮರಾಜನಗರ | 17-02-2020 | 607.06 | 22.21 | 5.40 | 634.67 |
| 2) ವಿಜಯಪುರ | 11-04-2019 | 637.97 | 18.71 | 14.87 | 671.55 |
| 3) ಕಲ್ಬುರ್ಗಿ | 04-05-2019 | 716.96 | 39.36 | - | 756.33 |
| 4) ಕೆ.ಜಿ.ಹಳ್ಳಿ-ಹೆಚ್ಚುವರಿ ಗೋದಾಮು | 01-08-2019 | 120.11 | 1.14 | - | 121.25 |
| 5) ಸಾಗರ | 14-02-2020 | 663.46 | 23.09 | 1.94 | 688.49 |
| 6) ಬ್ಯಾಟರಾಯನಪುರ * | 07-05-2019 | 758.64 | 58.83 | 134.42 | 951.89 |
| **ಒಟ್ಟು (ಅ )** | | **3,504.20** | **163.34** | **156.63** | **3,824.18** |
| **ಆ) ಆ.ವ.:2020-21** 1)ಬ್ಯಾಟರಾಯನಪುರ (ಟ್ರಾನ್ಸಫಾರ್ಮರ್ ಕೆಲಸ) | 14-10-2020 | - | 31.93 | - | 31.93 |
| 2) ಹಾಸನ | 31-08-2020 | 1,074.98 | 42.75 | 11.67 | 1,129.40 |
| 3) ಹುಬ್ಬಳ್ಳಿ | 17-08-2020 | 1,164.03 | 58.01 | 0.81 | 1,222.85 |
| 4) ಮೈಸೂರು-ಕೂರ್ಗಳ್ಳಿ | 17-06-2020 | 807.94 | 40.06 | 11.35 | 859.35 |
| 5) ಸೋಗಾನೆ | 15-06-2020 | 645.38 | 37.18 | 7.86 | 690.42 |
| **ಒಟ್ಟು (ಆ )** | | **3,692.33** | **209.93** | **31.69** | **3,933.95** |
| **ಒಟ್ಟು (ಅ + ಆ )** | | **7,196.53** | **373.27** | **188.32** | **7,758.13** |

**ಬೀದರನ ಮಧ್ಯಮಳಗೆ ಗೋದಾಮು ನಿರ್ಮಾಣ:**

ಬೀದರ್‌ನಲ್ಲಿ ನಿಗಮದ ಗೋದಾಮು ಕಟ್ಟಡ ನಿರ್ಮಾಣಕ್ಕಾಗಿ ಮೆ॥ ಕೆ.ಐ.ಎ.ಡಿ.ಬಿ ರವರು ಭೂಮಿ ಮಂಜೂರು ಮಾಡಿರುತ್ತಾರೆ. ಮೆ॥ ಕೆ.ಐ.ಎ.ಡಿ.ಬಿ ಯ ಯೋಜನಾ ಅನುಮೋದನೆಯೊಂದಿಗೆ ನಿಗಮವು ಕಟ್ಟಡದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿತು. ನಿರ್ಮಾಣದ ಹಂತದಲ್ಲಿ, ಏರ್ ಕ್ರಾಫ್ಟ್‌ನ ಲ್ಯಾಂಡಿಂಗ್ ವ್ಯಾಪ್ತಿಯ ಅಡಿಯಲ್ಲಿ ನಿವೇಶನವು ಬರುವುದರಿಂದ ವಿಮಾನದ ಸುರಕ್ಷತೆಗೆ ಅಪಾಯವನ್ನುಂಟುಮಾಡುತ್ತದೆ ಎಂದು ವಾಯುಸೇನಾ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಸ್ಥಗಿಗೊಳಿಸಲಾಗಿದ್ದು, ಪೂರ್ಣಗೊಂಡ ಕಾಮಗಾರಿಗೆ ಒಟ್ಟು ₹ 42.15 ಲಕ್ಷ ಮೊತ್ತವನ್ನು ನಿಗಮವು ಈಗಾಗಲೇ ಭರಿಸಿರುತ್ತದೆ. ಇದು ಮೆ॥ ಕೆ.ಐ.ಎ.ಡಿ.ಬಿ ಯವರಿಂದಾದ ಲೋಪವಾಗಿರುವುದರಿಂದ, ₹ 6.26 ಲಕ್ಷಗಳ ಉಪಯುಕ್ತ ನಿರ್ಮಾಣ ವೆಚ್ಚವನ್ನು ಪರಿಗಣಿಸಿದ ನಂತರ, ಉಳಿದ ಮೊತ್ತವನ್ನು ಸರಿದೂಗಿಸಲು ₹ 35.89 ಲಕ್ಷಗಳ ಮೊತ್ತದ ಪರಿಹಾರವನ್ನು ನೀಡುವಂತೆ ಕೋರಿ ಮೆ॥ ಕೆ.ಐ.ಎ.ಡಿ.ಬಿ ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಯಿತು.

ದಿನಾಂಕ 28.10.2020 ರಂದು ನಡೆದ ಕೆ.ಐ.ಎ.ಡಿ.ಬಿ ಯ 368 ನೇ ನಿರ್ದೆಶಕರ ಮಂಡಳಿ ಸಭೆಯಲ್ಲಿ ಈ ವಿಷಯವನ್ನು ಅವರು ಮಂಡಿಸಿ ಈ ನಷ್ಟವನ್ನು ಮೆ॥ ಕೆ.ಐ.ಎ.ಡಿ.ಬಿ ಮತ್ತು ಮೆ॥ ಕೆ.ಎಸ್.ಬಿ.ಸಿ.ಎಲ್ ಸಂಸ್ಥೆಗಳು ಸಮಾನವಾಗಿ ಭರಿಸಲು ನಿರ್ಧಾರವನ್ನು ತೆಗೆದುಕೊಂಡಿದ್ದು, ತದನಂತರ, ದಿನಾಂಕ 29.01.2021 ರಂದು ನಡೆದ ನಮ್ಮ ನಿಗಮದ 84 ನೇ ನಿರ್ದೇಶಕರ ಮಂಡಳಿ ಸಭೆಯ ಮುಂದೆ ಈ ಸಂಗತಿಗಳನ್ನು ಮಂಡಿಸಲಾಗಿ, ನಿಗಮದ ಪುಸ್ತಕಗಳಲ್ಲಿ ₹ 17.94 ಲಕ್ಷಗಳ ಬಾಕಿ ಮೊತ್ತವನ್ನು ಮನ್ನಾ ಮಾಡಲು ನಿರ್ದೇಕ ಮಂಡಳಿಯು ಅನುಮೋದನೆ ನೀಡಿತು. ಅದರಂತೆ ದಿನಾಂಕ 10.02.2021 ರಂದು ಮೆ॥ ಕೆ.ಐ.ಎ.ಡಿ.ಬಿ ಯು ₹ 17.95 ಲಕ್ಷಗಳ ಮೊತ್ತವನ್ನು ನಮ್ಮ ನಿಗಮಕ್ಕೆ ಪಾವತಿಸಿದ ಹಿನ್ನಲೆಯಲ್ಲಿ, ಉಳಿದ ಬಾಕಿ ಮೊತ್ತ ₹ 17.94 ಲಕ್ಷಗಳನ್ನು ಲೆಕ್ಕ ಪುಸ್ತಕಗಳಲ್ಲಿ ಮನ್ನಾ ಮಾಡಲಾಯಿತು. ಸದರಿ ಮಾಹಿತಿಯನ್ನು ಟಿಪ್ಪಣಿ ಸಂಖ್ಯೆ.22-ಇತರ ವೆಚ್ಚಗಳು, ಸ್ಥಿರ ಸ್ವತ್ತುಗಳು/ಮನ್ನಾ ಮಾಡಿದ ವಸೂಲಾತಿಗಳಡಿಯಲ್ಲಿ ಬಹಿರಂಗಪಡಿಸಲಾಗಿದೆ.

**ಟಿಪ್ಪಣಿ 3: ಇತರೆ ಆರ್ಥಿಕ ಆಸ್ತಿಗಳು (ಧೀರ್ಘಾವಧಿ)**

(₹ ಲಕ್ಷಗಳಲ್ಲಿ)

| ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 1 ಎಪ್ರಿಲ್, 2019 ರಲ್ಲಿದಂತೆ |
|---|---|---|---|
| ಆಧಾರ ರಹಿತ, ಸುಸ್ತಿಯಲ್ಲಿರುವ | | | |
| **(I) ಆದಾರ ಸಹಿತ ಠೇವಣಿಗಳು** | | | |
| ಎ) ವಿದ್ಯುತ್‌ಶಕ್ತಿ ಠೇವಣಿ | 7.58 | 1.19 | 0.64 |
| ಬಿ) ಬಾಡಿಗೆ ಠೇವಣಿ * | 344.93 | 356.18 | 338.36 |
| ಸಿ) ದೂರವಾಣಿ ಠೇವಣಿ | 3.45 | 3.22 | 3.23 |
| **(II) ಇತರೆ ಬಾಕಿಗಳು** | | | |
| ಎ) ಸ್ಟಿರಿಟ್ ಖರೀದಿದಾರರಿಂದ ಬರಬೇಕಾದ ಬಾಕಿ | - | 0.08 | 0.03 |
| ಬಿ) ಮದ್ಯ ಸರಬರಾಜುದಾರರಿಂದ ಬರಬೇಕಾದ ಬಾಕಿ | 7.19 | 11.38 | 6.90 |
| ಸಿ)ಸರ್ಕಾರದಿಂದ ಪಡೆಯಬಹುದಾದ ಮೌಲ್ಯವರ್ಧಿತ ತೆರಿಗೆ ಮರುಪಾವತಿ ಮೊತ್ತ ** | 0.97 | 0.97 | 880.84 |
| ಒಟ್ಟು | 364.12 | 373.02 | 1,230.00 |

ಸಂಪೂರ್ಣ ಹಣಕಾಸಿನ ಸ್ವತ್ತುಗಳ ಪೂರ್ಣ ಮೊತ್ತವನ್ನು ಭೋಗ್ಯದ ವೆಚ್ಚದಲ್ಲಿ ನಡೆಸಲಾಗುತ್ತದೆ.

*ಬಾಡಿಗೆ ಠೇವಣಿಯು ಪ್ರದಾನ ಕಛೇರಿ ಮತ್ತು ಮಳಗೆಗಳ ಕಟ್ಟಡಕ್ಕೆ ನೀಡಿದ ಭದ್ರತಾ ಠೇವಣಿಯನ್ನು ಒಳಗೊಂಡಿರುತ್ತದೆ.

** ಕರ್ನಾಟಕ ಸರ್ಕಾರದಿಂದ ಮರುಪಾವತಿ ಪಡೆಯ ಬೇಕಾದ ಮೊತ್ತದದಲ್ಲಿ ಈ ಕೆಳಗಿನವು ಒಳಗೊಂಡಿವೆ: ವ್ಯಾಟ್ ಮರುಪಾವತಿಗೆ ₹ 0.97 ಲಕ್ಷ ಮೊತ್ತವನ್ನು ವಾಣಿಜ್ಯ ತೆರಿಗೆ ಇಲಾಖೆಯಿಂದ 2017-2018ರ ಹಣಕಾಸು ವರ್ಷಕ್ಕೆ (ಏಪ್ರಿಲ್ ನಿಂದ ಜೂನ್) ಮೌಲ್ಯಮಾಪನವನ್ನು ಇನ್ನೂ ಪೂರ್ಣಗೊಳಿಸಿಲ್ಲ ಎಂದು ತೋರಿಸಲಾಗಿದೆ.

## ಟಿಪ್ಪಣಿ 4: ಇತರೆ ದೀರ್ಘಾವಧಿ ಆಸ್ತಿಗಳು

(₹ ಲಕ್ಷಗಳಲ್ಲಿ)

| ಕ್ರ.ಸಂ | ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 1 ಎಪ್ರಿಲ್, 2019 ರಲ್ಲಿದಂತೆ |
|---|---|---|---|---|
| | **ಆಧಾರ ರಹಿತ, ಸುಸ್ತಿಯಲ್ಲಿರುವುದು** | | | |
| 1 | ಬಂಡವಾಳದ ಮುಂಗಡ-ಕಟ್ಟಡ ಕಾಮಗಾರಿಗಳು | 60.91 | 269.44 | 486.91 |
| 2 | ಬಾಡಿಗೆಯಿಂದ ಬರಬೇಕಾದದ್ದು | - | - | 72.71 |
| 3 | ಮುಂಗಡ-(ಖರ್ಚಿಗೆ ಮುನ್ನಾ) | 1.99 | 2.97 | 3.96 |
| 4 | ಮದ್ಯಸಾರ ಸರಬರಾಜುದಾರರಿಗೆ ಪಾವತಿಸಿದ ಮುಂಗಡ | 677.76 | 95.31 | 46.92 |
| 5 | ಸರ್ಕಾರದ ಇಲ್ಲಾಖೆಗಳಲ್ಲಿರುವ ಬಾಕಿ | | | |
| | 1) ಸೇವಾ ತೆರಿಗೆ(ನೋಟ್ ಸಂ.31) | 62.81 | 9.32 | 9.32 |
| | 2) ಮೌಲ್ಯಾಧಾರಿತ ತೆರಿಗೆ(ಕೆಳಗಿನ ಟಿಪ್ಪಣಿಯಲ್ಲಿ ವಿವರಿಸಿದಂತೆ) | 56.08 | 56.08 | 56.08 |
| | **ಒಟ್ಟು** | **859.55** | **433.12** | **675.90** |

**ಸರ್ಕಾರದ ಇಲ್ಲಾಖೆಗಳಲ್ಲಿರುವ ಬಾಕಿ – ವಾಣಿಜ್ಯ ತೆರಿಗೆ ಇಲಾಖೆ**

2013-14ನೇ ಸಾಲಿಗೆ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳು ನೋಟೀಸ್ ಒಂದನ್ನು ಜಾರಿಮಾಡಿ ಫಾರಂ-ಹೆಚ್ ಅನ್ನು ಮೆ॥ ರೇಣುಕಾ ಷುಗರ್ಸ್ ಕಂಪನಿಯ ಸಗಟು ಡೀಮ್ಡ್ ರಫ್ತು ವ್ಯವಹಾರಗಳ ಬಗ್ಗೆ ಮಾಡಿರುವ ಸಂಬಂಧ ರಿಟರ್ನ್ಸ್‌ನಲ್ಲಿ ಸಲ್ಲಿಸಿಲ್ಲವೆಂದು ಪ್ರಸ್ಥಾಪಿಸಿ ವಿವರಣೆಯನ್ನೂ ಕೇಳಲಾಗಿರುತ್ತದೆ. ವಾಣಿಜ್ಯ ತೆರಿಗೆ ಇಲಾಖೆಯು ಅಂತಿಮ ಕರ ನಿರ್ಧರಣೆ ಮಾಡುವ ವೇಳೆ ಸದರಿ ವರ್ಷಕ್ಕೆ ₹2,05,02,163.00 ಎಂದು ಹಕ್ಕು ಭಾದ್ಯತೆ ಸಾಧಿಸಿರುತ್ತದೆ. ನಿಗಮವು ಈ ನೋಟೀಸಿಗೆ ಅನುಗುಣವಾಗಿ ಉತ್ತರಿಸಿ / ಸಮ ಜಾಯಿಷಿಯನ್ನೂ ನೀಡಿ, ಫಾರಂ – ಹೆಚ್ ಅನ್ನು ಸಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಸಮರ್ಥಿಸಿಕೊಳ್ಳುತ್ತಾ ಅದು ನೇರ ರಪ್ತಾಗಿರುತ್ತದೆಂದೂ, ಅದ್ದರಿಂದ ಅದನ್ನು ರಿಟರ್ನ್ಸ್‌ನಲ್ಲಿ ತಿಳಿಸಿಲ್ಲವೆಂದು ವ್ಯಾಖ್ಯಾನ ಮಾಡಿ ಅದು ನೇರ ರಫ್ತು ಹೊರತು ಡೀಮ್ಡ್ ರಫ್ತಲ್ಲವೆಂದು ನಿಗಮವು ಪ್ರತಿಪಾಧಿಸಿದೆ. ರಿಟರ್ನ್ಸ್‌ಅನ್ನು ತಿದ್ದುಪಡಿ ಮಾಡಲು ನಿಗಮವು ಪ್ರಾರ್ಥಿಸಿದೆ.

ಡಿಸಿಸಿಟಿ, ಬೆಂಗಳೂರು ಪರಿಷ್ಕೃತ ಡಿಮಾಂಡ್ ಸಲ್ಲಿಸಿ, ₹ 1,38,97,742/- ತೆರಿಗೆ ಮತ್ತು ₹ 47,94,718/- ಗಳ ತೆರಿಗೆಯ ಮೇಲಿನ ಬಡ್ಡಿ ಸೇರಿ ಒಟ್ಟು ₹ 1,86,92,460/- ಗಳನ್ನು ಪಾವತಿಸಲು ಒತ್ತಾಯಿಸಿದೆ. ಇದನ್ನು ಮೆ॥ ರೇಣುಕಾ ಷುಗರ್ಸ್‌ರವರಿಗೆ ಮಾಡಿದ ರಫ್ತು ಮಾರಾಟಕ್ಕೆ ಸಂಬಂಧಿಸಿದಂತೆ, ರಿಟರ್ನ್ ಸಲ್ಲಿಸುವಾಗ ರಫ್ತು ಎಂದು ಪರಿಗಣಿಸಲ್ಪಟ್ಟ ಮಾರಾಟಕ್ಕೆ ಹೆಚ್. ಫಾರಂ ಸಲ್ಲಿಸದಿರುವುದಕ್ಕಾಗಿ ನೀಡಲಾದ ನೋಟೀಸು ಜಾರಿ ಮಾಡಿದ ದಿನಾಂಕದಿಂದ 30 ದಿನಗಳ ಒಳಗಾಗಿ ಪಾವತಿಸಬೇಕೆಂದು ತಿಳಿಸಿತ್ತು.

ಡಿಸಿಸಿಟಿಯ ಆದೇಶದಿಂದ ಅಸಮಾಧಾನಗೊಂಡ ನಿಗಮವು ವಾಣಿಜ್ಯತೆರಿಗೆಗಳ ಜಂಟಿ ಆಯುಕ್ತರು (ಅಪೀಲುಗಳು (4)) ಬೆಂಗಳೂರು ಇವರಿಗೆ ದಿನಾಂಕ 06-12-2016 ರಂದು ಡಿಮಾಂಡ್‌ನ ಮೊತ್ತದ 30%ನ ₹ 56,07,738/- ಗಳನ್ನು ಪಾವತಿಸಿ ಮೇಲ್ಮನವಿ ಸಲ್ಲಿಸಿದೆ. ಉಳಿದ ಮೊತ್ತ ₹ 1,30,08,472/-ಗಳ ವಸೂಲಿಗೆ ಮಧ್ಯಂತರ ತಡೆಯಾಜ್ಞೆ ನೀಡುವಂತೆ ಹಾಗೂ ಡಿಸಿಸಿಟಿಯ ಆದೇಶವನ್ನು ಬದಿಗಿರಿಸುವಂತೆ ವಿನಂತಿಸಲಾಗಿತ್ತು.

₹1,30,08,472/-ಗಳ ಮೊತ್ತಕ್ಕೆ ಮಾರ್ಪಡಿಸಲಾಗದ ಬ್ಯಾಂಕ್ ಗ್ಯಾರಂಟಿ ನೀಡಬೇಕೆಂಬ ಷರತ್ತಿನೊಂದಿಗೆ ದಿನಾಂಕ 06-01-2017ರಲ್ಲಿ ವಾಣಿಜ್ಯ ತೆರಿಗೆಯ ಜಂಟಿ ಆಯುಕ್ತರು ಮಧ್ಯಂತರ ತಡೆಯಾಜ್ಞೆಯನ್ನ ನೀಡಿದರು. ದಿನಾಂಕ 20-01-2017ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಸಮಾನ ಮೊತ್ತಕ್ಕೆ ನಿಶ್ಚಿತ ಠೇವಣಿ ನೀಡಿ ಬ್ಯಾಂಕ್ ಗ್ಯಾರಂಟಿಯನ್ನು ನಿಗಮವು ಒದಗಿಸಿತು. ಕೆಎಸ್‌ಬಿಸಿಎಲ್ ಈ ಬೇಡಿಕೆಯ ತೆರಿಗೆ ಮೊತ್ತ ನೀಡಬೇಕಿಲ್ಲವಾದ್ದರಿಂದ, ಸದರಿ ಮೊತ್ತವನ್ನು ಮೆ॥ ರೇಣುಕಾ ಷುಗರ್ಸ್ ಲಿಮಿಟೆಡ್‌ರವರಿಗೆ ನೀಡಬೇಕಾದ ಮೊತ್ತಕ್ಕೆ ಹೊಂದಾಣಿಕೆ ಮಾಡಲಾಯಿತು. ಆದರೆ ದಿನಾಂಕ 31.03.2017ರ ತನ್ನ ಆದೇಶದಲ್ಲಿ ಜೆಸಿಸಿಟಿರವರು, ನಿಗಮವು ಸಲ್ಲಿಸಿದ ಅಪೀಲನ್ನು ವಜಾಮಾಡಿತು.

ಜೆಸಿಸಿಟಿ ಆದೇಶದಿಂದ ಅಸಮಾಧಾನಗೊಂಡ ನಿಗಮವು 30ನೇ ಮೇ 2017ರಂದು ಕರ್ನಾಟಕದ ಮಾರಾಟ ತೆರಿಗೆ ಮೇಲ್ಮನವಿ ನ್ಯಾಯಾಧಿಕರಣದ ಮುಂದೆ ಅಪೀಲು ಸಲ್ಲಿಸಿದ್ದು, ಇದು ನ್ಯಾಯಾಧಿಕರಣದ ಮುಂದೆ ಬಾಕಿ ಇದೆ.

ಬೆಂಗಳೂರಿನ ವಾಣಿಜ್ಯ ತೆರಿಗೆಯ ಉಪ ಆಯುಕ್ತರು ದಿನಾಂಕ 26.02.2018 ಮತ್ತು 05.03.2018 ರಲ್ಲಿ ಬರೆದ ಪತ್ರಗಳಲ್ಲಿ ₹ 130.08 ಲಕ್ಷಗಳನ್ನು ಪಾವತಿಸಲು ಯಾವುದೇ ಪ್ರಾಧೀಕಾರದಿಂದ ಪಾವತಿ ತಡೆ ಆದೇಶ ಇಲ್ಲದ ಕಾರಣ

ತೆರಿಗೆ ಮೊತ್ತ ತಕ್ಷಣ ಪಾವತಿಸಲು ತಿಳಿಸಿರುತ್ತಾರೆ. ಕೆ.ಎಸ್ .ಬಿ.ಸಿ.ಎಲ್ ಯು ದಿನಾಂಕ 02.03.2018 ಮತ್ತು 24.03.2018 ರಂದು ಬರೆದ ಪತ್ರಗಳಲ್ಲಿ ವಾಣಿಜ್ಯ ತೆರಿಗೆಯ ಮೇಲ್ಮನವಿ ಪ್ರಾಧಿಕಾರದಲ್ಲಿ, ವಾಣಿಜ್ಯ ತೆರಿಗೆಯ ಜಂಟಿ ಆಯುಕ್ತರ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಂಖ್ಯೆ 297 ಆಪ್ 2017 ಸಲ್ಲಿಸಿರುವ ಕಾರಣ ವಿಚಾರಣೆ ಇತ್ಯರ್ಥ ಆಗುವವರೆಗೂ. ಪಾವತಿ ಆದೇಶವನ್ನು ಜಾರಿಗೊಳಿಸದಿರಲು ಕೋರಿರುತ್ತದೆ. ಆದಾಗ್ಯೂ, ಬ್ಯಾಂಕ್ ಗ್ಯಾರಂಟಿ ಮೊತ್ತ ರೂ.1,30.08 ಲಕ್ಷಗಳನ್ನು ದಿನಾಂಕ 27.04.2022 ರವರೆಗೆ ನವೀಕರಿಸಲಾಗಿದೆ.

**ಟಿಪ್ಪಣಿ 5: ಚಾಲ್ತಿ ಹೂಡಿಕೆಗಳು**

ಮ್ಯೂಚುಯಲ್ ಫಂಡ್‌ಗಳಲ್ಲಿನ ಹೂಡಿಕೆಗಳನ್ನು ಲಾಭ ಮತ್ತು ನಷ್ಟ ತಃಖ್ತೆ ಮೂಲಕ ಪೇರ್ ವಾಲ್ಯು ನಲ್ಲಿ ವರ್ಗೀಕರಿಸಲಾಗಿದೆ. ಈ ಹೂಡಿಕೆಗಳನ್ನು ಆರಂಭದಲ್ಲಿ ಫೇರ್ ವಾಲ್ಯು ನಲ್ಲಿ ಅಳೆಯಲಾಗುತ್ತದೆ ಮತ್ತು ಆಸ್ತಿ ಹೊಣೆ ತ:ಖ್ತೆಯ ದಿನಾಂಕವನ್ನು ಸಹ ಫೇರ್ ವಾಲ್ಯು ನಲ್ಲಿ ಅಳೆಯಲಾಗುತ್ತದೆ. ಆರಂಭಿಕ ಮತ್ತು ನಂತರದ ಅಳತೆಯ ನಡುವಿನ ವ್ಯತ್ಯಾಸವನ್ನು ಲಾಭ ಮತ್ತು ನಷ್ಟದ ತ:ಖ್ತೆಗೆ ವರ್ಗಾಯಿಸಲಾಗುತ್ತದೆ. ಕಂಪನಿಯ ನಗದ ಚಲಾವಣೆಯ ಅಗತ್ಯವನ್ನು ಪರಿಗಣಿಸಿ 2 ರಿಂದ 3 ದಿನಗಳವರೆಗೆ ಮೂಚ್ಯುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡಲಾಗುತ್ತದೆ.

**ಲಾಭ ಅಥವಾ ನಷ್ಟದ ಮೂಲಕ ಹೂಡಿಕೆಗಳನ್ನು ಫೇರ್ ವಾಲ್ಯು ಖಾತೆಗೆ ಸಾಗಿಸಲಾಗುತ್ತದೆ** (₹ ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | 31 ಮಾರ್ಚ್ 2021 ಕ್ಕೆ ಇದ್ದಂತೆ | 31 ಮಾರ್ಚ್ 2020 ಕ್ಕೆ ಇದ್ದಂತೆ | 1 ಎಪ್ರಿಲ್, 2019 ಕ್ಕೆ ಇದ್ದಂತೆ |
|---|---|---|---|---|
| | **ಮ್ಯೂಚುಯಲ್ ಫಂಡ್‌ಗಳಲ್ಲಿ ಹೂಡಿಕೆಗಳು: (ಗುರುತಿಸದ)** | | | |
| 1 | **ಯು.ಟಿ.ಐ.ಲಿಕ್ವಿಡ್ ಕ್ಯಾಷ್ ಪ್ಲಾನ್** ಎನ್.ಎ.ವಿ:-1019.4457 ದಿನಾಂಕ 31.03.2019 ಯುನಿಟ್ಸ:-1963434.357 | - | - | 20,016.15 |
| 2 | **ಎಸ್.ಬಿ.ಐ.ಒವರ್ ನೈಟ್ ಫಂಡ್ ನೇರ ಬೆಳವಣಿಗೆ** ಎನ್.ಎ.ವಿ.:-3351.74 ದಿನಾಂಕ 31.03.2021 ಯುನಿಟ್ಸ :-477383.53 | 16,000.65 | - | - |
| 3 | **ಬರೋಡ ಮುಚ್ಯುಯಲ್ ಫಂಡ್** ಎನ್.ಎ.ವಿ.:-1002.0844 ದಿನಾಂಕ 31.03.2019 ಯುನಿಟ್ಸ:-107858.175 | - | - | 1,080.83 |
| | **ಒಟ್ಟು** | **16,000.65** | **-** | **21,096.98** |

**ಟಿಪ್ಪಣಿ 6: ನಗದು ಮತ್ತು ನಗದು ಸಮಾನ ಬಾಬ್ತುಗಳು** (₹ ಲಕ್ಷಗಳಲ್ಲಿ)

| | ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 1 ಎಪ್ರಿಲ್, 2019 ರಲ್ಲಿದಂತೆ |
|---|---|---|---|---|
| I | ಬ್ಯಾಂಕ್‌ನಲ್ಲಿರುವ ಶಿಲ್ಕು - ಚಾಲ್ತಿ ಖಾತೆಗಳಲ್ಲಿ | 15,248.81 | 180.95 | 17,676.69 |
| II | ನಗದು ಚಿಲ್ಲರೆ ನಗದು - ಪ್ರಧಾನ ಕಛೇರಿ ಮತ್ತು ಮಳಿಗೆಗಳಲ್ಲಿ | 6.71 | 9.54 | 8.59 |
| | **ಒಟ್ಟು** | **15,255.52** | **190.49** | **17,685.28** |

**ಟಿಪ್ಪಣಿ 7: ಮೇಲಿನ (1) ಹೊರತು ಪಡಿಸಿ ಬ್ಯಾಂಕ್‌ನಲ್ಲಿರುವ ಶಿಲ್ಕು** (₹ ಲಕ್ಷಗಳಲ್ಲಿ)

| | ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 1 ಎಪ್ರಿಲ್, 2019 ರಲ್ಲಿದಂತೆ |
|---|---|---|---|---|
| I | ಬ್ಯಾಂಕ್‌ನಲ್ಲಿರುವ ಶಿಲ್ಕು* - ಖಾತೆಗಳಲ್ಲಿನ ಠೇವಣಿಗಳು(ಅಂದಾಜು 12 ತಿಂಗಳಿಗೆ) | 33,254.03 | 27,309.40 | 17,741.64 |
| | **ಒಟ್ಟು** | **33,254.03** | **27,309.40** | **17,741.64** |

ಈ ಮೊತ್ತವು ಕ್ರಮವಾಗಿ ₹159.02 ಲಕ್ಷಗಳು ಮತು ₹150.39ಲಕ್ಷಗಳನ್ನು 31 ಮಾರ್ಚ್ 2021 ಮತ್ತು 31 ಮಾರ್ಚ್ 2020 ರಂತೆ ನಿರ್ಬಂದಿಸಲಾಗಿದೆ. ಈ ನಿರ್ಬಂದವು ಎಸ್.ಬಿ.ಐ. ಫಿಕ್ಸೆಡ್ ಡಿಪಾಸಿಟ್‌ಗೆ ಸಂಬಂದಿಸಿರುತ್ತದೆ. ಇದು ಮೆ॥ ಶ್ರೀ ರೇಣುಕಾ ಶುಗರ್ಸ್ ಲಿ., ರವರ ವ್ಯಾಟ್ ಪ್ರಕರಣಕ್ಕೆ ಸಂಬಂದಿಸಿದಂತೆ ತಡೆಯಾಜ್ಞೆ ಪಡೆಯಲು ಖರೀದಿಸಿದ ಬ್ಯಾಂಕ್ ಗ್ಯಾರಂಟಿಗೆ ಸಂಬಂದಿಸಿದ್ದಾಗಿದೆ.

**ಟಿಪ್ಪಣಿ 8: ಇತರೆ ಆರ್ಥಿಕ ಆಸ್ತಿಗಳು – ಚಾಲ್ತಿ** (₹ ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 1 ಎಪ್ರಿಲ್, 2019 ರಲ್ಲಿದಂತೆ |
|---|---|---|---|---|
| 1 | ಪ್ರಾಪ್ತಿಯಾದ ಆದರೆ ಬಾಕಿ ಇರದ ಬಡ್ಡಿ | 657.70 | 917.80 | 276.43 |
| 2 | ಸಿಬ್ಬಂದಿಯ ಹಬ್ಬದ ಮುಂಗಡ ಹಣ | 2.06 | 3.77 | 1.18 |
| 3 | ವಸೂಲುಮಾಡಬೇಕಾದ ರಜಾ ವೇತನ | 55.06 | 106.30 | 104.87 |
| 4 | ಡಿಸ್ಟಿಲರಿಗಳಿಂದ ಮರುಪಡೆಯಬಹುದಾದ ಹಣ | – | – | 1.75 |
| 5 | ಬಾಡಿಗೆಯಿಂದ ವಸೂಲುಮಾಡಬೇಕಾದ ಹಣ **(ಕೆಳಗಿನ ನೋಟ್ ನಲ್ಲಿ ಉಲ್ಲೇಖಿಸಿದೆ)** | 5.87 | 37.92 | 14.58 |
| 6 | ಸರ್ಕಾರದಿಂದ ವಸೂಲಾಗಬಲ್ಲ ಹಣ | – | – | 27.99 |
| 7 | ಇತರರಿಂದ ವಸೂಲಾಗಬಲ್ಲ ಹಣ | 0.01 | 2.20 | 0.56 |
| 8 | ಮಧ್ಯ ಸರಬರಾಜುದಾರರಿಂದ ಪಡೆಯಬಹುದಾದ ಹಣ | 125.10 | 166.22 | 4.89 |
| 9 | ಮಧ್ಯಸಾರ ಖರೀದಿದಾರರಿಂದ ಪಡೆಯಬಹುದಾದ ಮೊತ್ತ | 44.68 | 0.67 | 2.80 |
| 10 | ಮರುಪಡೆಯಬಹುದಾದ ಬ್ಯಾಂಕ್ ಶುಲ್ಕ | – | 0.35 | 0.45 |
| 11 | ಕೆ ಐ ಎ ಡಿ ಬಿ ಇಂದ ಪಡೆಯಬಹುದಾದ ಮೊತ್ತ | – | 35.89 | 35.89 |
| 12 | ವಿಮಾ ಕಂಪನಿಯಿಂದ ಬರಬೇಕಾದ ಮೊತ್ತ | 0.98 | 0.98 | – |
| 13 | ಅಬಕಾರಿ ಇಲಾಖೆಯಿಂದ ಬರಬೇಕಾದ ಬಾಡಿಗೆ ಮೊತ್ತ* | 20.21 | 67.37 | – |
| 14 | ಕೇಂದ್ರ ಸರ್ಕಾರದಿಂದ ಬರಬೇಕಾದ ಸೇವಾ ತೆರಿಗೆ /ಸರಕು & ಸೇವಾ ತೆರಿಗೆ | 432.00 | 658.94 | – |
| 15 | ವಸೂಲುಮಾಡಬೇಕಾದ ಟಿ ಡಿ ಎಸ್ | 10.67 | – | – |
| | **ಒಟ್ಟು** | **1,354.34** | **1,998.41** | **471.39** |

ಹಣಕಾಸಿನ ಸ್ವತ್ತುಗಳ ಸಂಪೂರ್ಣ ಮೊತ್ತವನ್ನು ಭೋಗ್ಯದ ವೆಚ್ಚದಲ್ಲಿ ನಡೆಸಲಾಗುತ್ತದೆ.

**ವೈಟ್ ಫೀಲ್ಡ್–2 ಡಿಪೊಗೆ ಸಂಬಂದಿಸಿದ ದುರಸ್ತಿ ಶುಲ್ಕಗಳು ಮತ್ತು ಬಾಡಿಗೆದಾರರ ಪರವಾಗಿ ಮಾಡಿದ ಇತರ ವೆಚ್ಚಗಳು**

ನಿಗಮವು ಸರ್ಕಾರಿ ಎಜೆನ್ಸಿಗಳಾದ ಮೈಸೂರು ತಂಬಾಕು ಕಂಪನಿ ಮತ್ತು ಇತರರಿಂದ ಕಟ್ಟಡಗಳನ್ನು ಮಾಸಿಕ ಪಾವತಿಯಡಿಲ್ಲಿ ಬಾಡಿಗೆಗೆ ಪಡೆಯಲಾಗಿದೆ. ಮೇಲಿನ ಮೊತ್ತದಲ್ಲಿ ವೈಟ್ ಫೀಲ್ಡ ಡಿಪೋ–2ಕ್ಕೆ ಸಂಬಂಧಸಿದ ದುರಸ್ತಿ ಶುಲ್ಕ ₹ 5.75 ಲಕ್ಷಗಳು ಒಳಗೊಂಡಿದೆ. ಸಂಸ್ಥೆಯು ತನ್ನ ಕಾರ್ಯಾಚರಣೆಗಾಗಿ ಕೆಲವು ದುರಸ್ತಿ ಶುಲ್ಕಗಳನ್ನು ಭರಿಸಬೇಕಾಯಿತು ಮತ್ತು ಈ ದುರಸ್ತಿ ವೆಚ್ಚವನ್ನು ಸದರಿ ಕಟ್ಟಡದ ಮಾಲಿಕರ ಒಪ್ಪಿಗೆಯ ಮೇರೆಗೆ ಪಾವತಿಸಬೇಕಾದ ಮಾಸಿಕ ಬಾಡಿಗೆಯಿಂದ ಮರುಪಡೆಯಲಾಗುತ್ತಿದೆ. ಇಂಡ್ ಎಸ್ 109ರ ಪ್ರಕಾರ ಆರ್ಥಿಕ ಪರಣಾಮದಡಿಯಲ್ಲಿ ಈಗಿನ ಮೌಲ್ಯವನ್ನು ಗುರುತಿಸುವುದು ಅಪ್ರಸ್ತುತವಾಗಿರುವುದರಿಂದ ಇಂಡ್ ಎಸ್ 109ನ್ನು ಅಳವಡಿಸುವ ಅಗತ್ಯವಿಲ್ಲ ಎಂದು ಆಡಳಿತ ಮಂಡಳಿಯು ಅಭಿಪ್ರಾಯಪಟ್ಟಿದೆ.

*ಬ್ಯಾಟರಾಯನಪುರದಲ್ಲಿರುವ ಕಟ್ಟಡವನ್ನು 2019 ರ ಮೇ 04 ರಿಂದ ಅಬಕಾರಿ ಇಲಾಖೆಗೆ ಗುತ್ತಿಗೆ ನೀಡಲಾಗಿದೆ. ಫೆಬ್ರವರಿ ಮತ್ತು ಮಾರ್ಚ್–2021 ರ ತಿಂಗಳುಗಳ ಬಾಡಿಗೆಯನ್ನು 31 ನೇ ಮಾರ್ಚ್, 2021 ರಂದು ಸ್ವೀಕರಿಸಬೇಕಾಗಿರುವಂತೆ ತೋರಿಸಲಾಗಿದೆ.

**ಟಿಪ್ಪಣಿ 9: ಆಸ್ತಿಗಳ ಚಾಲ್ತಿ ತೆರಿಗೆ (ನಿವ್ವಳ)**

ಆದಾಯ ತೆರಿಗೆ ವೆಚ್ಚವು ಚಾಲ್ತಿ ಮತ್ತು ಮುಂದೂಡಲ್ಪಟ್ಟ ಆದಾಯ ತೆರಿಗೆಯನ್ನು ಒಳಗೊಂಡಿದೆ. ಸಮಗ್ರ ಆದಾಯದಲ್ಲಿ ಗುರುತಿಸಲಾದ ಹಾಗೂ ನೇರವಾಗಿ ಈಕ್ವಿಟಿಯಲ್ಲಿ ಗುರುತಿಸಲ್ಪಟ್ಟಿರುವುದನ್ನು ಹೊರತುಪಡಿಸಿ ಆದಾಯ ತೆರಿಗೆ ವೆಚ್ಚವನ್ನು ಲಾಭ ಮತ್ತು ನಷ್ಟದ ತ:ಖ್ತೆಯ ನಿವ್ವಳ ಲಾಭದಲ್ಲಿ ಗುರುತಿಸಲಾಗಿದೆ,. ಆಸ್ತಿ ವಿವರಣಾ ಪಟ್ಟಿ ದಿನಾಂಕದವರೆಗೆ ಹೊರಡಿಸಲ್ಪಟ್ಟ ತೆರಿಗೆ ದರಗಳು ಮತ್ತು ತೆರಿಗೆ ನಿಯಮಗಳನ್ನು ಬಳಸಿ ಚಾಲ್ತಿ ಮತ್ತು ಹಿಂದಿನ ಅವಧಿಗಳ ನಿರೀಕ್ಷಿಸಲಾದ ಚಾಲ್ತಿ ಆದಾಯ ತೆರಿಗೆಯನ್ನು ತೆರಿಗೆ ಅಧಿಕಾರಿಗಳಿಗೆ ಪಾವತಿಸಲು ಅಥವಾ ವಸೂಲಿ ಮಾಡುವಂತಹವುಗಳನ್ನು ಗುರುತಿಸಲಾಗುತ್ತದೆ. ಮುಂದೂಡಲ್ಪಟ್ಟ ತೆರಿಗೆ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು, ಮುಂದೂಡಲ್ಪಟ್ಟ ತೆರಿಗೆ ಆಸ್ತಿ ಮತ್ತು ಹೊಣೆಗಾರಿಕೆಗಳ ಮೇಲಿನ ತೆರಿಗೆಯಲ್ಲಿ ಮತ್ತು ಅವುಗಳ ಹಣಕಾಸು ಹೇಳಿಕೆಗಳಲ್ಲಿ ಗುರುತಿಸಲಾಗಿರುವ ಮೊತ್ತಗಳಲ್ಲಿ ಇರುವ ತಾತ್ಕಾಲಿಕ ವ್ಯತ್ಯಾಸಗಳಿಗೆ ಅನುಗುಣವಾಗಿ ಗುರುತಿಸಲಾಗುತ್ತದೆ. ಆಸ್ತಿಗಳನ್ನು ಪ್ರತಿ ವರದಿ ಮಾಡುವ ದಿನಾಂಕದಂದು ಪರಿಶೀಲಿಸಲಾಗುತ್ತದೆ ಮತ್ತು ಸಂಬಂಧಿಸಿದ ತೆರಿಗೆ ಲಾಭಗಳು ದೊರೆಯುವಂತಿಲ್ಲವಾದರೆ ಆ ಮಟ್ಟಕ್ಕೆ ಕಡಿಮೆ ಮಾಡಲಾಗುತ್ತದೆ.

ಮುಂದೂಡಲ್ಪಟ್ಟ ಆದಾಯ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಅಂತಹ ತಾತ್ಕಾಲಿಕ ವ್ಯತ್ಯಾಸಗಳನ್ನು ಮರುಪಡೆಯಲು ಅಥವಾ ಇತ್ಯರ್ಥಪಡಿಸುವ ವರ್ಷಗಳಲ್ಲಿ ತೆರಿಗೆಗೆ ಒಳಪಡುವ ತೆರಿಗೆ ಆದಾಯಕ್ಕೆ ಅನ್ವಯವಾಗುತ್ತವೆ. ಮುಂದೂಡಲ್ಪಟ್ಟ

ಆದಾಯ ತೆರಿಗೆ ಆಸ್ತಿಯನ್ನು ಭವಿಷ್ಯದ ತೆರಿಗೆಯ ಲಾಭವನ್ನು ತಾತ್ಕಾಲಿಕ ವ್ಯತ್ಯಾಸಗಳಿಗೆ ಮತ್ತು ತೆರಿಗೆ ನಷ್ಟಗಳಿಗೆ ಹೊಂದಿಸುವ ಮಟ್ಟಿಗೆ ಗುರುತಿಸಲಾಗುತ್ತದೆ, ನಿಗಮವು ಚಾಲ್ತಿ ತೆರಿಗೆ ಆಸ್ತಿ ಮತ್ತು ಚಾಲ್ತಿ ತೆರಿಗೆ ಹೊಣೆಗಾರಿಕೆಗಳನ್ನು ಸರಿದೂಗಿಸುತ್ತದೆ, ಅಲ್ಲಿ ಕಾನೂನುಬದ್ಧವಾಗಿ ಹಕ್ಕನ್ನು ಬಳಸಿ ಗುರುತಿಸಲಾದ ಮೊತ್ತವನ್ನು ಹೊಂದಿಸಲು ಮತ್ತು ಅದು ನಿವ್ವಳ ಆಧಾರದ ಮೇಲೆ ಮುಕ್ತಾಯಗೊಳಿಸಲು ಅಥವಾ ಆಸ್ತಿಯನ್ನು ನಗದಾಗಿಸಿ ಹೊಣೆಗಾರಿಕೆಯನ್ನು ಏಕಕಾಲದಲ್ಲಿ ಇತ್ಯರ್ಥಗೊಳಿಸುವ ಮಟ್ಟಿಗೆ ಹೊಣೆಗಾರಿಕೆಯನ್ನು ಏಕಕಾಲಕ್ಕೆ ಹೊಂದಿಸುತ್ತದೆ.

**ಹೊಣೆ / (ಆಸ್ತಿ) ಒಳಗೊಂಡಿರುವ ಆದಾಯ ತೆರಿಗೆ (ಪ್ರಸ್ತುತ ತೆರಿಗೆ)** **(₹ ಲಕ್ಷಗಳಲ್ಲಿ)**

| ಕ್ರ. ಸಂ. | ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 1 ಎಪ್ರಿಲ್, 2019 ರಲ್ಲಿದಂತೆ |
|---|---|---|---|---|
| | **ತೆರಿಗೆ ಮುಂಗಡ** | | | |
| a | ಆದಾಯ ತೆರಿಗೆ ಹ.ವ. 2003-04 | 120.54 | 120.54 | 120.54 |
| b | ಆದಾಯ ತೆರಿಗೆ ಹ.ವ. 2004-05 | 6.66 | 6.66 | 6.66 |
| c | ಆದಾಯ ತೆರಿಗೆ ಹ.ವ. 2006-07 | - | - | - |
| d | ಆದಾಯ ತೆರಿಗೆ ಹ.ವ. 2007-08 | 28.75 | 28.75 | 24.24 |
| e | ಆದಾಯ ತೆರಿಗೆ ಹ.ವ. 2008-09 | 239.27 | 239.27 | 239.27 |
| f | ಆದಾಯ ತೆರಿಗೆ ಹ.ವ. 2009-10 | 81.85 | 81.85 | 81.85 |
| g | ಆದಾಯ ತೆರಿಗೆ ಹ.ವ. 2010-11 | 30.48 | 30.48 | 0.17 |
| h | ಆದಾಯ ತೆರಿಗೆ ಹ.ವ. 2011-12 | - | - | - |
| i | ಆದಾಯ ತೆರಿಗೆ ಹ.ವ. 2012-13 | 14.97 | 14.97 | 48.48 |
| j | ಆದಾಯ ತೆರಿಗೆ ಹ.ವ. 2013-14 | 14.16 | 14.16 | 14.16 |
| k | ಆದಾಯ ತೆರಿಗೆ ಹ.ವ. 2014-15 | 79.38 | 79.38 | 79.38 |
| l | ಆದಾಯ ತೆರಿಗೆ ಹ.ವ. 2015-16 | 1,714.23 | 1,714.23 | 1,714.23 |
| m | ಆದಾಯ ತೆರಿಗೆ ಹ.ವ. 2016-17 | 85.92 | 1,950.00 | 1,882.85 |
| n | ಆದಾಯ ತೆರಿಗೆ ಹ.ವ. 2017-18 | 65.60 | 1,657.25 | 1,656.90 |
| o | ಆದಾಯ ತೆರಿಗೆ ಹ.ವ. 2018-19 | 1,815.19 | 1,815.19 | 1,568.23 |
| p | ಆದಾಯ ತೆರಿಗೆ ಹ.ವ. 2019-20 | 1,944.31 | 1,944.31 | - |
| q | ಆದಾಯ ತೆರಿಗೆ ಹ.ವ. 2020-21 | 2,848.95 | - | - |
| | **ಒಟ್ಟು ಮುಂಗಡ ತೆರಿಗೆ ( ಅ )** | **9,090.26** | **9,697.04** | **7,436.96** |
| | ತೆರೆಗೆಯ ಹವಣಿಕೆ | | | |
| a | ಆದಾಯ ತೆರಿಗೆ ಹವಣಿಕೆ - ವರ್ಷ 2006-07 | 20.31 | 20.31 | 15.80 |
| b | ಆದಾಯ ತೆರಿಗೆ ಹವಣಿಕೆ - ವರ್ಷ 2014-15 | - | - | - |
| c | ಆದಾಯ ತೆರಿಗೆ ಹವಣಿಕೆ - ವರ್ಷ 2015-16 | 1,707.90 | 1,707.90 | 1,707.90 |
| d | ಆದಾಯ ತೆರಿಗೆ ಹವಣಿಕೆ - ವರ್ಷ 2016-17 | - | 1,864.09 | 1,864.09 |
| e | ಆದಾಯ ತೆರಿಗೆ ಹವಣಿಕೆ - ವರ್ಷ 2017-18 | - | 1,591.65 | 1,591.65 |
| f | ಆದಾಯ ತೆರಿಗೆ ಹವಣಿಕೆ - ವರ್ಷ 2018-19 | 1,817.26 | 1,817.26 | 1,817.26 |
| g | ಆದಾಯ ತೆರಿಗೆ ಹವಣಿಕೆ - ವರ್ಷ 2019-20 | 1,883.31 | 1,883.31 | - |
| h | ಆದಾಯ ತೆರಿಗೆ ಹವಣಿಕೆ - ವರ್ಷ 2020-21 | 2,580.88 | - | - |
| | **ಒಟ್ಟು ಆದಾಯ ತೆರಿಗೆ ಹವಣಿಕೆ ( ಆ )** | **8,009.66** | **8,884.52** | **6,996.70** |
| | **ನಿವ್ವಳ ಆದಾಯ ತೆರಿಗೆ ಆಸ್ತಿ (ಅ- ಆ)** | **1,080.60** | **812.52** | **440.26** |

ಸೂಚನೆ: ಹ.ವ. 2016-17 ಮತ್ತು 2017-18ರ ಮೌಲ್ಯ ಮಾಪನ ಪೂರ್ಣಗೊಂಡಿರುವುದರಿಂದ ತೆರಿಗೆಯ ಹವಣಿಕೆಯನ್ನು ಆಯಾ ಹಣಕಾಸು ವರ್ಷಗಳ ಆದಾಯ ತೆರಿಗೆ ವಿರುದ್ಧ ಸರಿಹೊಂದಿಸಲಾಗಿದೆ. ಆದಾಗ್ಯೂ, ಮೇಲ್ಮನವಿಗಳು ಬಾಕಿ ಉಳಿದಿವೆ.

## ಮುಂದೂಡಲ್ಪಟ್ಟ ತೆರಿಗೆ ಹೊಣೆ / ಸ್ವತ್ತುಗಳ ವಿವರಗಳು

## ಮುಂದೂಡಲ್ಪಟ್ಟ ತೆರಿಗೆಯ ಹೊಣೆ /ಸ್ವತ್ತುಗಳ ಭಾಗಗಳು ಈ ಕೆಳಕಂಡತಿವೆ

(₹ ಲಕ್ಷಗಳಲ್ಲಿ)

| ವಿವರಗಳು | 2020 | 2019 | 2018 |
|---|---|---|---|
| **ಮುಂದೂಡಲ್ಪಟ್ಟ ತೆರಿಗೆಯ ಹೊಣೆ** | | | |
| ಆಸ್ತಿಯ ಮೇಲಿನ ಸವಕಳಿ | (137.91) | (32.67) | - |
| ಜಿ ಎಸ್ ಟಿ ಮರುಪಾವತಿ | – | - | - |
| ಇತರೆ ವೆಚ್ಚಗಳು | – | - | - |
| ಒಟ್ಟು | (137.91) | (32.67) | – |
| **ಮುಂದೂಡಲ್ಪಟ್ಟ ತೆರಿಗೆಯ ಆಸ್ತಿ** | – | – | – |
| ಆಸ್ತಿಯ ಮೇಲಿನ ಸವಕಳಿ | – | – | – |
| ಗ್ರಾಚ್ಯುಟಿಗೆ- ಹವಣಿಕೆ | – | 1.05 | – |
| ಒಟ್ಟು | – | 1.05 | – |
| **ಮುಂದೂಡಲ್ಪಟ್ಟ ಆಸ್ತಿ/(ಹೊಣೆ)** | (137.91) | (31.62) | – |

## ವರ್ಷಾವಧಿಯಲ್ಲಿ ಮುಂದೂಡಲ್ಪಟ್ಟ ಆದಾಯ ತೆರಿಗೆ ಆಸ್ತಿ ಮತ್ತು (ಹೊಣೆಗಾರಿಕೆ) ಯ ಚಲನೆ ಈ ಕೆಳಕಂಡಂತಿರುತ್ತವೆ.

(₹ ಲಕ್ಷಗಳಲ್ಲಿ)

| ವಿವರಗಳು | ಗ್ರಾಚ್ಯುಟಿಗೆ ಹೆಚ್ಚುವರಿ ಪಾವತಿ | ಸವಕಳಿ | ಮೊತ್ತ |
|---|---|---|---|
| **ಎಪ್ರಿಲ್ 1, 2019 ಕ್ಕೆ** | – | – | – |
| ಮುಂದೂಡಿದ ತೆರಿಗೆ ಆದಾಯ/(ವೆಚ್ಚ) | 1.05 | (32.67) | (31.62) |
| **ಮಾರ್ಚ 31, 2020 ಕ್ಕೆ** | 1.05 | (32.67) | (31.62) |
| ಮುಂದೂಡಿದ ತೆರಿಗೆ ಆದಾಯ/(ವೆಚ್ಚ) | (1.05) | (105.24) | (106.29) |
| **ಮಾರ್ಚ 31, 2021 ಕ್ಕೆ** | – | (137.91) | (137.91) |

## ಆದಾಯ ತೆರಿಗೆಗೆ ಹವಣಿಕೆ

(₹ ಲಕ್ಷಗಳಲ್ಲಿ)

| ವಿವರಗಳು | 2020-2021 | 2019-2020 | 2018-2019 |
|---|---|---|---|
| **ಆರಂಭಿಕ ಶಿಲ್ಕು** | 8,884.51 | 6,996.70 | 7,160.76 |
| ಹಣಕಾಸಿನ ವರ್ಷಕ್ಕೆ ಸೇರ್ಪಡೆಗಳು | 2,580.88 | 1,883.31 | 1,817.26 |
| ಒಟ್ಟು | 11,465.39 | 8,880.01 | 8,978.02 |
| ಕಳೆ: ಹಣಕಾಸು ವರ್ಷದ ಕಳೆಯುವಿಕೆಗಳು | 3,455.73 | (4.51) | 1981.32 |
| ಅಂತಿಮ ಶಿಲ್ಕು | 8,009.66 | 8,884.52 | 6,996.70 |

## ಟಿಪ್ಪಣಿ 10: ಇತರೆ ಚಾಲ್ತಿ ಆಸ್ತಿಗಳು

(₹ ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 1 ಎಪ್ರಿಲ್, 2019 ರಲ್ಲಿದಂತೆ |
|---|---|---|---|---|
| ಅ) | ವಾಹನ ಖರೀದಿಗಾಗಿ – ಮುಂಗಡ | – | 28.97 | – |
| ಆ) | ಮಾರಾಟಗಾರರರಿಗೆ ಮುಂಗಡ(ಸರಬರಾಜುದಾರರು ಮತ್ತು ಸೇವೆದಾರರು) | 6.19 | 7.27 | 2.68 |
| ಇ) | ಗ್ರಾಚ್ಯುಟಿಗೆ ಟ್ರಸ್ಟಿಗೆ ನೀಡಿದ ಹೆಚ್ಚುವರಿ ದೇಣಿಗೆ | 4.72 | – | 9.96 |
| ಈ) | ಅವಧಿ ಪೂರ್ವ ಪಾವತಿಗಳು (ಅವಧಿ ಪೂರ್ವಸಂದಾಯಿತ ಖರ್ಚು) | 177.01 | 68.44 | 39.43 |
| ಉ) | ವಾಹನದ ಇಂದನಕ್ಕಾಗಿ ಮುಂಗಡ | 1.37 | 0.81 | 1.70 |
| ಊ) | ಅಬಕಾರಿ ಲೇಬಲ್ ದಾಸ್ತಾನು ಖಾತೆ | 4.62 | 3.05 | 2.84 |
| ಎ) | ಸರಬರಾಜುದಾರರಿಗೆ ಮುಂಗಡ (ಮದ್ಯಸಾರ) | 651.74 | 1,345.65 | 1,169.10 |
| | ಒಟ್ಟು | 845.65 | 1,454.19 | 1,225.71 |

## ಟಿಪ್ಪಣಿ 11 : ಈಕ್ವಿಟಿ ಷೇರು ಬಂಡವಾಳ:

(₹ ಲಕ್ಷಗಳಲ್ಲಿ)

| ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | | 31 ಮಾರ್ಚ್ 2020 ರಲ್ಲಿದಂತೆ | | 01 ಏಪ್ರಿಲ್ 2019 ರಲ್ಲಿದಂತೆ | |
|---|---|---|---|---|---|---|
| | ಸಂಖ್ಯೆ | ₹ ಲಕ್ಷ ಗಳಲ್ಲಿ | ಸಂಖ್ಯೆ | ₹ ಲಕ್ಷ ಗಳಲ್ಲಿ | ಸಂಖ್ಯೆ | ₹ ಲಕ್ಷ ಗಳಲ್ಲಿ |
| **ಅಧಿಕೃತ ಷೇರು ಬಂಡವಾಳ:** | | | | | | |
| ಈಕ್ವಿಟಿ ಷೇರುಗಳು ಪ್ರತಿ ಷೇರಿಗೆ 1000/- ರೂಗಳಂತೆ | 1,20,000 | 1,200.00 | 1,20,000 | 1,200.00 | 1,20,000 | 1,200.00 |
| **ನೀಡಲ್ಪಟ್ಟ** | | | | | | |
| ಈಕ್ವಿಟಿ ಷೇರುಗಳು ಪ್ರತಿ ಷೇರಿಗೆ 1000/- ರೂಗಳಂತೆ | 1,20,000 | 1,200.00 | 1,20,000 | 1,200.00 | 1,20,000 | 1,200.00 |
| **ಸಂದಿತ (ಚಂದಾದಾರಿತ)** | | | | | | |
| ಈಕ್ವಿಟಿ ಷೇರುಗಳು ಪ್ರತಿ ಷೇರಿಗೆ 1000/- ರೂಗಳಂತೆ | 1,20,000 | 1,200.00 | 1,20,000 | 1,200.00 | 1,20,000 | 1,200.00 |
| **ಪೂರ್ತಿ ಪಾವತಿಸಿದ ಷೇರು** | | | | | | |
| ಪೂರ್ತಿ ಪಾವತಿಸಿದ ಈಕ್ವಿಟಿ ಷೇರುಗಳು ಪ್ರತಿ ಷೇರಿಗೆ 1000/- ರೂಗಳಂತೆ | 1,20,000 | 1,200.00 | 1,20,000 | 1,200.00 | 1,20,000 | 1,200.00 |
| ಒಟ್ಟು | | 1,200.00 | | 1,200.00 | | 1,200.00 |

**ಇತರೆ ಮಾಹಿತಿಗಳು:**

| ಒಟ್ಟು ಸಂಖ್ಯೆಯ ಈಕ್ವಿಟಿ ಬಂಡವಾಳದ ಶೇ 5% ರಷ್ಟು ಹಿಡುವಳಿ ಹೊಂದಿರುವ ವಿವರಗಳು: | ಮುಖ ಬೆಲೆ (ರೂಗಳಲ್ಲಿ) | ಹೊಂದಿರುವ ಷೇರುಗಳು | ಮೊತ್ತ (ಲಕ್ಷಗಳಲ್ಲಿ) |
|---|---|---|---|
| ರಾಜ್ಯಪಾಲರು, ಕರ್ನಾಟಕ ರಾಜ್ಯ | 1,000 | 1,19,500 | 1,195.00 |
| ಒಟ್ಟು | - | 1,19,500 | 1,195.00 |

ಕಂಪನಿಯು ₹ 1,000 ದ ಸಮಾನ ಮೌಲ್ಯವನ್ನು ಹೊಂದಿರುವ ಈಕ್ವಿಟಿ ಷೇರುಗಳು ಎಂದು ಕರೆಯಲ್ಪಡುವ ಒಂದು ವರ್ಗದ ಷೇರುಗಳನ್ನು ಮಾತ್ರ ಹೊಂದಿದೆ. ಈಕ್ವಿಟಿ ಷೇರುಗಳನ್ನು ಹೊಂದಿರುವ ಪ್ರತಿಯೊಬ್ಬರು ಪ್ರತಿ ಷೇರಿಗೆ ಒಂದು ಮತಕ್ಕೆ ಅರ್ಹರಾಗಿರುತ್ತಾರೆ. ಸಂಪೂರ್ಣ ಷೇರು ಬಂಡವಾಳವನ್ನು ಕರ್ನಾಟಕ ಸರ್ಕಾರ ಹೊಂದಿದೆ.

ಕಂಪನಿಯ ದಿವಾಳಿಯ ಸಂದರ್ಭದಲ್ಲಿ, ಎಲ್ಲಾ ಆದ್ಯತೆಯ ಮೊತ್ತವನ್ನು ವಿತರಿಸಿದ ನಂತರ, ಈಕ್ವಿಟಿ ಷೇರುದಾರರು ತಾವು ಹೊಂದಿರುವ ಈಕ್ವಿಟಿ ಷೇರುಗಳ ಸಂಖ್ಯೆಗೆ ಅನುಗುಣವಾಗಿ ಕಂಪನಿಯ ಉಳಿದ ಸ್ವತ್ತುಗಳನ್ನು ಸ್ವೀಕರಿಸಲು ಅರ್ಹತೆ ಹೊಂದಿರುವವರು ಆದಾಗ್ಯೂ, ಅಂತಹ ಯಾವುದೇ ಆದ್ಯತೆಯ ಮೊತ್ತಗಳು ಪ್ರಸ್ತುತ ಅಸ್ತಿತ್ವದಲ್ಲಿಲ್ಲ.

ಕಂಪೆನಿಯು ಯಾವುದೇ ಹೋಲ್ಡಿಂಗ್ ಕಂಪನಿಯನ್ನು ಹೊಂದಿಲ್ಲ. ಕಂಪೆನಿಗಳ ಯಾವುದೇ ಷೇರುಗಳನ್ನು ಆಯ್ಕೆಗಳು ಮತ್ತು ಒಪ್ಪಂದಗಳ ಅಡಿಯಲ್ಲಿ ಷೇರುಗಳ ಮಾರಾಟ / ಹೂಡಿಕೆಗಳಿಗೆ ಕಾಯ್ದಿರಿಸಲಾಗಿಲ್ಲ.

**ಲಾಭಾಂಶ :**

ಷೇರುಗಳ ಅಂತಿಮ ಲಾಭಾಂಶವನ್ನು ಷೇರುದಾರರು ಅನುಮೋದಿಸಿದ ದಿನಾಂಕದಂದು ಹೊಣೆಗಾರಿಕೆಯಾಗಿ ದಾಖಲಿಸಲಾಗುತ್ತದೆ. ಕಂಪನಿಯು ಭಾರತೀಯ ರೂಪಾಯಿಗಳಲ್ಲಿ ಲಾಭಾಂಶವನ್ನು ಘೋಷಿಸುತ್ತದೆ ಮತ್ತು ಪಾವತಿಸುತ್ತದೆ. 2019-20ರ ಆರ್ಥಿಕ ವರ್ಷಕ್ಕೆ, ಷೇರುದಾರರು ಅಕ್ಟೋಬರ್ 29, 2020 ರಂದು ನಡೆದ 17 ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ, ₹240.00 ಲಕ್ಷಗಳ ಲಾಭಾಂಶದ ಮೊತ್ತವನ್ನು ಅನುಮೋದಿಸಿದ ನಂತರ ಮತ್ತು ಈ ಮೊತ್ತವನ್ನು ಘನ ರಾಜ್ಯ ಸರ್ಕಾರಕ್ಕೆ ಪಾವತಿಸಲಾಗಿದೆ.

ಹಣಕಾಸು ಕಾಯ್ದೆ, 2020ರಲ್ಲಿ ಲಾಭಾಂಶ ವಿತರಣಾ ತೆರಿಗೆಯನ್ನು (ಡಿಡಿಟಿ) ರದ್ದುಪಡಿಸಲಾದೆ ಮತ್ತು 01.04.2020ರ ನಂತರ ಲಾಭಾಂಶ ವಿತರಣ ತೆರಿಗೆ ಕಲಂ 115-0 ನಿಬಂದನೆಗಳು ಅನ್ವಯವಾಗುವುದಿಲ್ಲ. ನಿಗಮವು ಹ.ವ.2020-21ರಿಂದ ವಿತರಿಸಲಾದ ಲಾಭಾಂಶಕ್ಕೆ, ಲಾಭಾಂಶ ವಿತರಣಾ ತೆರಿಗೆಯನ್ನು ಪಾವತಿಸುವುದರಿಂದ ವಿನಾಯಿತಿ ಪಡೆದಿದೆ.

ಇಂಡ್ ಎಸ್ ಅಡಿಯಲ್ಲಿ, ಮಂಡಳಿಯು ಪ್ರಸಾಪಿಸಿದ ಲಾಭಾಂಶವನ್ನು ಹೊಂದಾಣಿಕೆ ಮಾಡದ ಘಟನೆ ಎಂದು ಪರಿಗಣಿಸಲಾಗುತ್ತದೆ. ಆದುದರಿಂದ ಅದನ್ನು ಪ್ರಸ್ತು ವರ್ಷದಲ್ಲಿ ಗುರುತಿಸಲಾಗುವುದಿಲ್ಲ. ಆದರೆ ಇದನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆಗೊಂಡ ನಂತರ ಗುರುತಿಸಲಾಗುತ್ತದೆ.

**5% ಅಥವಾ ಅದಕ್ಕಿಂತ ಹೆಚ್ಚಿನ ಈಕ್ವಿಟಿ ಷೇರನ್ನು ಹೊಂದಿರುವ ಷೇರುದಾರರು**

| ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | | 31 ಮಾರ್ಚ್ 2020 ರಲ್ಲಿದಂತೆ | | 01 ಏಪ್ರಿಲ್ 2019 ರಲ್ಲಿದಂತೆ | |
|---|---|---|---|---|---|---|
| | ಹೊಂದಿರುವ ಷೇರುಗಳ | ಶೇಕಡ | ಹೊಂದಿರುವ ಷೇರುಗಳ | ಶೇಕಡ | ಹೊಂದಿರುವ ಷೇರುಗಳ | ಶೇಕಡ |
| ರಾಜ್ಯಪಾಲರು, ಕರ್ನಾಟಕ ರಾಜ್ಯ | 1,19,500 | 99.58 | 1,19,500 | 99.58 | 1,19,500 | 99.58 |

**ಟಿಪ್ಪಣಿ 12: ವ್ಯಾಪಾರದ ಸಂದಾಯಗಳು: (ಧೀರ್ಘಾವಧಿ)** (₹ ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 01 ಏಪ್ರಿಲ್ 2019 ರಲ್ಲಿದಂತೆ |
|---|---|---|---|---|
| (i) | ಸೂಕ್ಷ್ಮ ಮತ್ತು ಸಣ್ಣ ಉದ್ಯಮದಿಂದ ಉಳಿದಿರುವ ಬಾಕಿಗಳು (ಕೆಳಗೆ ನೋಟ್ ಗಮನಿಸಿ) | - | - | - |
| (ii) | ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳನ್ನು ಹೊರತುಪಡಿಸಿ ಸಾಲಗಾರರ ಒಟ್ಟು ಬಾಕಿಗಳು | | | |
| | ವ್ಯಾಪಾರದ ಸಂದಾಯಗಳು- ಆರ್.ಎಸ್ | 54.70 | 0.28 | - |
| | ವ್ಯಾಪಾರದ ಸಂದಾಯಗಳು- ಐ.ಎಂ.ಎಲ್ | 5.22 | 5.66 | 4.91 |
| | ಒಟ್ಟು | **59.92** | **5.94** | **4.91** |

**ಟಿಪ್ಪಣಿ 13:ಇತರೆ ಆರ್ಥಿಕ ಹೊಣೆಗಾರಿಕೆಗಳು: (ಧೀರ್ಘಾವಧಿ)** (₹ ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 01 ಏಪ್ರಿಲ್ 2019 ರಲ್ಲಿದಂತೆ |
|---|---|---|---|---|
| (i) | ಸರಬರಾಜುದಾರರಿಂದ ಸಂದಾಯವಾದ ಹಣ: ಅ)ಇತರರ ಪರವಾಗಿ ಸ್ವೀಕರಿಸಿದ ಹಣ | 17.58 | 17.58 | 17.58 |
| | ಒಟ್ಟು | **17.58** | **17.58** | **17.58** |

**ಟಿಪ್ಪಣಿ 14:ಇತರೆ ಧೀರ್ಘಾವಧಿ ಹೊಣೆಗಾರಿಕೆಗಳು:** (₹ ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 01 ಏಪ್ರಿಲ್ 2019 ರಲ್ಲಿದಂತೆ |
|---|---|---|---|---|
| (i) | **ಇತರೆ ಸಂದಾಯಗಳು-ಸೇವೆ ಮತ್ತು ಇತರೆ** | | | |
| | ಅ)ಕ್ಯಾನನ್ ಡಿಟೆಕ್ಟಿವ್ ಮತ್ತು ಸೆಕ್ಯುರಿಟಿ ಸರ್ವೀಸ್ | 332.56 | 332.56 | 332.56 |
| | ಆ) ನವೋದಯ ಸರ್ವೀಸ್ ಸೆಂಟರ್ | 186.83 | 186.83 | 186.83 |
| (ii) | ಮದ್ಯಸಾರ ಸರಬರಾಜುದಾರರಿಂದ ಪಡೆದ ಮುಂಗಡ | 184.11 | 38.42 | 46.73 |
| | ಒಟ್ಟು | **703.50** | **557.81** | **566.12** |

**ಟಿಪ್ಪಣಿ: 15: ಮಾರಾಟ ವಹಿವಾಟಿನಿಂದ ಪಾವತಿಸಬೇಕಾಗಿರುವ ಮೊತ್ತ(ಚಾಲ್ತಿ)** (₹ ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 01 ಏಪ್ರಿಲ್ 2019 ರಲ್ಲಿದಂತೆ |
|---|---|---|---|---|
| ಅ) | ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ ಬಾಕಿ ಇರುವ ಹೊಣೆಗಾರಿಕೆ(ಕೆಳಗೆ ನೋಟ್ ಗಮನಿಸಿ) | - | - | - |
| ಆ) | ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ ಬಾಕಿ ಇರುವ ಹೊಣೆಗಾರಿಕೆ ಹೊರತು ಪಡಿಸಿ | | | |
| | ಅ)ವ್ಯಾಪಾರದ ಸಂದಾಯಗಳು- ಆರ್.ಎಸ್ | 505.88 | 35.12 | 1,794.81 |
| | ಆ)ವ್ಯಾಪಾರದ ಸಂದಾಯಗಳು- ಐ.ಎಂ.ಎಲ್ | 34,265.15 | 0.44 | 26,335.57 |
| | ಒಟ್ಟು | 34,771.03 | 35.56 | 28,130.38 |

ಹಣಕಾಸಿನ ಸ್ವತ್ತುಗಳ ಸಂಪೂರ್ಣ ಮೊತ್ತವನ್ನು ಭೋಗ್ಯದ ವೆಚ್ಚದಲ್ಲಿ (amortized cost) ನಮೂದಿಸಲಾಗಿದೆ. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯ್ದೆ, 2006ರ ಅಡಿಯಲ್ಲಿ ಕೆಲವೇ ಮಾರಾಟಗಾರರು ಇದ್ದಾರೆ ಮತ್ತು ಅವರಿಗೆ ಸಂಬಂಧಿಸಿದಂತೆ ಯಾವುದೇ ಹೊಣೆಗಾರಿಕೆ ಇರುವುದಿಲ್ಲ. ಆದ್ದರಿಂದ, ಈ ಕಾಯಿದೆಯಡಿ ಪಾವತಿಸಬೇಕಾದ ಹಣಕ್ಕೆ ನೀಡಿದ / ನೀಡಬೇಕಾದ ಬಡ್ಡಿಯೊಂದಿಗೆ ವರ್ಷಾಂತ್ಯದಲ್ಲಿ ಪಾವತಿಸದ ಮೊತ್ತ ಇರದ ಕಾರಣ ಒದಗಿಸಲಾಗಿಲ್ಲ.

**ಟಿಪ್ಪಣಿ 16: ಇತರೆ ಆರ್ಥಿಕ ಸಾಲಗಳು (ಚಾಲ್ತಿ)**

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 01 ಏಪ್ರಿಲ್ 2019 ರಲ್ಲಿದಂತೆ |
|---|---|---|---|---|
| a) | ತೆರಿಗೆ ವ್ಯತ್ಯಾಸದಿಂದ ವಸೂಲಾದ ಮೊತ್ತ | 25.32 | 8.71 | 9.06 |
| b) | ಇತರರ ಪರವಾಗಿ ಪಡೆದದ್ದು (ಠೇವಣಿ ಮರುಪಾವತಿ) ಇ.ಎಫ್.ಟಿ. | - | 4.92 | 4.92 |
| c) | ಭದ್ರತಾ ಠೇವಣಿ – ಸೇವೆಗಳು | 196.53 | 194.67 | 189.43 |
| d) | ಅರ್ನೆಸ್ಟ್ ಮನಿ ಡೆಪಾಸಿಟ್ | 0.73 | 2.78 | 4.60 |
| e) | ಪಾವತಿಸಬೇಕಾದ ಇತರೆ – ಸೇವೆಗಳು ಮತ್ತು ಇತರೆ | 810.46 | 1,027.81 | 997.00 |
| f) | ಪಾವತಿಸಬೇಕಾದ ಸಿಬ್ಬಂಧಿ ವೆಚ್ಚ | 91.39 | 117.97 | 99.91 |
| g) | ಸಿಬ್ಬಂದಿಯ ಅನುಕೂಲಕ್ಕಾಗಿ ಪಾವತಿಸಬೇಕಾಗಿರುವ ಹವಣಿಕೆಗಳು* | - | - | - |
| | (1)ಗ್ರಾಚ್ಯುಟಿ | 89.12 | 95.98 | 93.53 |
| | (2)ರಜೆ ಸಂಬಳ | 176.96 | 185.05 | 192.13 |
| | (3)ಎಕ್ಸ್‌ಗ್ರೇಷಿಯ | 59.70 | 63.44 | 66.34 |
| | (4) ನಿವೃತ್ತಿ ಕೊಡುಗೆ | 6.10 | 7.99 | 9.81 |
| h) | ಸಿವಿಲ್ ಗುತ್ತಿಗೆದಾರರು ಮತ್ತು ಕ್ಯಾಪಿಟಲ್ ಪಾವತಿಗಳು | - | - | - |
| | (1) ಕೆ.ಹೆಚ್.ಬಿ.ಗೆ ಪಾವತಿಸಬೇಕಾದ ಮೊತ್ತ | 46.63 | 321.34 | 1,044.98 |
| | (2) ಕೆ.ಆರ್.ಐ.ಡಿ.ಎಲ್‌ಗೆ ಪಾವತಿಸಬೇಕಾದ ಮೊತ್ತ | 213.27 | 326.56 | 6.17 |
| | (3) ಇತರೆ ಗುತ್ತಿಗೆದಾರರಿಗೆ ಪಾವತಿಸಬೇಕಾದ ಮೊತ್ತ | 17.46 | 360.06 | 172.47 |
| | **ಒಟ್ಟು** | **1,733.67** | **2,717.28** | **2,890.36** |

ಹಣಕಾಸಿನ ಸ್ವತ್ತುಗಳ ಸಂಪೂರ್ಣ ಮೊತ್ತವನ್ನು ಭೋಗ್ಯದ ವೆಚ್ಚದಲ್ಲಿ ನಡೆಸಲಾಗುತ್ತದೆ.

*ಇವು ನಿಯೋಜಿತ ಉದ್ಯೋಗಿಗಳಿಗೆ ಸಂಬಂದಿಸಿವೆ. ಈ ಮೊತ್ತವನ್ನು ನೌಕರರ ಸಂಬಂದಿತ ಪೋಷಕ ಸಂಸ್ಥೆಗೆ ಪಾವತಿಸಬೆಕು. ಇದನ್ನು ಸಾಮಾನ್ಯವಾಗಿ ಮುಂದಿನ ಹಣಕಾಸು ವರ್ಷದಲ್ಲಿ ಪಾವತಿಸಲಾಗುತ್ತದೆ.

**ಟಿಪ್ಪಣಿ 17: ಇತರೆ ಚಾಲ್ತಿ ಹೊಣೆಗಾರಿಕೆಗಳು:** (₹ ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 01 ಏಪ್ರಿಲ್ 2019 ರಲ್ಲಿದಂತೆ |
|---|---|---|---|---|
| (i) | ಶಾಸನ ಬದ್ಧ ಬಾಕಿಗಳು | | | |
| | (ಅ) ಪಾವತಿಸಬೇಕಾದ ಟಿ.ಡಿ.ಎಸ್ ಬಾಬ್ತು | 58.05 | 107.60 | 60.35 |
| | (ಆ) ಪಾವತಿಸಬೇಕಾದ ತೆರಿಗೆ (ಟಿ ಸಿ ಎಸ್)* | 483.46 | - | 409.32 |
| | (ಇ) ಪಾವತಿಸಬೇಕಾದ ವೃತ್ತಿ ತೆರಿಗೆ | 0.67 | 0.73 | 0.77 |
| | (ಈ) ಪಾವತಿಸಬೇಕಾದ ಜಿ.ಎಸ್.ಟಿ / ಸೇವಾ ತೆರಿಗೆ | 132.07 | 175.68 | 140.17 |
| | (ಏ) ಸಿವಿಲ್ ಕಾಮಗಾರಿಗಳ ಮೇಲಿನ ಲೇಬರ್ ಸೆಸ್ | 3.76 | 0.87 | - |
| | (ಐ) ಸಿವಿಲ್ ಕಾಮಗಾರಿಗಳ ಮೇಲಿನ ರಾಯಧನ | 3.78 | 0.48 | - |
| (ii) | ಶಾಸನ ಬದ್ಧ ಬಾಕಿಯ ಮೇಲಿನ ಬಡ್ಡಿ ಮತ್ತು ದಂಡ | 0.02 | 2.40 | 2.87 |
| (iii) | ನಡೆಯುತ್ತಿರುವ ಯೋಜನೆಗಳಲ್ಲಿ ಖರ್ಚು ಮಾಡಬೇಕಾದ ಸಿ.ಎಸ್.ಆರ್ ಹಣ | 7.72 | 9.41 | - |
| (iii) | ಗ್ರಾಹಕರಿಂದ ಪಡೆದ ಮುಂಗಡ ಮೊತ್ತ | | | |
| | 1) ಚಿಲ್ಲರೆ ವ್ಯಾಪಾರಿಗಳಿಂದ ಪಡೆದಿರುವ ಮುಂಗಡ ಮೊತ್ತ (ಐ.ಎಂ.ಎಲ್.) | 6,046.16 | 7,135.43 | 7,522.89 |
| | 2) ಮಧ್ಯಸಾರ ಖರೀದಿದಾರರಿಂದ ಪಡೆದಿರುವ ಮುಂಗಡ ಮೊತ್ತ (ಆರ್.ಎಸ್.) | 2,493.21 | 3,723.75 | 3,357.20 |
| | **ಒಟ್ಟು** | **9,228.90** | **11,156.35** | **11,493.57** |

**ಟಿಪ್ಪಣಿ 18: ಹವಣಿಕೆಗಳು (ಚಾಲ್ತಿ)**

ಹಿಂದಿನ ಘಟನೆಯ ಪರಿಣಾಮವಾಗಿ, ಕಂಪನಿಯು ಪ್ರಸ್ತುತ ಕಾನೂನುಬದ್ಧ ಅಥವಾ ರಚನಾತ್ಮಕ ಹೊಣೆಗಾರಿಕೆಯನ್ನು ಸಮಂಜಸವಾಗಿ ಅಂದಾಜು ಮಾಡಬಹುದಾದರೆ ಒಂದು ನಿಬಂಧನೆಯನ್ನು ಗುರುತಿಸಲಾಗುತ್ತದೆ ಮತ್ತು ಬಾಧ್ಯತೆಯನ್ನು

ಇತ್ಯರ್ಥಗೊಳಿಸಲು ಆರ್ಥಿಕ ಪ್ರಯೋಜನಗಳ ಹೊರಹರಿವು ಅಗತ್ಯವಾಗಿರುತ್ತದೆ. ನಿರೀಕ್ಷಿತ ಭವಿಷ್ಯದ ಹಣದ ಹರಿವನ್ನು ತೆರಿಗೆ-ಪೂರ್ವ ದರದಲ್ಲಿ ರಿಯಾಯಿತಿ ಮಾಡುವ ಮೂಲಕ ನಿಬಂಧನೆಗಳನ್ನು ನಿರ್ಧರಿಸಲಾಗುತ್ತದೆ, ಇದು ಹಣದ ಸಮಯದ ಮೌಲ್ಯದ ಪ್ರಸುತ ಮಾರುಕಟ್ಟೆ ಮೌಲ್ಯ ಮೌಲ್ಯಪಾಪನಗಳನ್ನು ಮತ್ತು ಹೊಣೆಗಾರಿಕೆಗೆ ನಿರ್ದಿಷ್ಟವಾದ ಅಪಾಯಗಳನ್ನು ಪ್ರತಿಬಿಂಬಿಸುತ್ತದೆ.

**(₹ ಲಕ್ಷಗಳಲ್ಲಿ)**

| ಕ್ರ. ಸಂ. | ವಿವರಗಳು | 31 ಮಾರ್ಚ್ 2021 ರಲ್ಲಿದಂತೆ | 31 ಮಾರ್ಚ್ 2020 ರಲ್ಲಿದಂತೆ | 01 ಏಪ್ರಿಲ್ 2019 ರಲ್ಲಿದಂತೆ |
|---|---|---|---|---|
| (i) | ಗ್ರಾಚ್ಯುಟಿ- ಹವಣಿಕೆಗಳು | - | 4.17 | - |
| | ಒಟ್ಟು | | **4.17** | **-** |

ಸಿಬ್ಬಂದಿಯ ಅನುಕೂಲಕ್ಕಾಗಿ ಪಾವತಿಸಬೇಕಾಗಿರುವ ಹವಣಿಕೆಗಳು ಗುತ್ತಿಗೆ ನೌಕರರಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಟಿಪ್ಪಣಿ 21ರಲ್ಲಿ ವಿವರಗಳನ್ನು ನೀಡಲಾಗಿದೆ.

**ಆರ್ಥಿಕ ಸಾಧನಗಳು**

**ಆರಂಭಿಕ ಗುರುತಿಸುವಿಕೆ**

"ನಿಗಮವು ಆರ್ಥಿಕ ಆಸ್ತಿಗಳ ಮತ್ತು ಆರ್ಥಿಕ ಹೊಣೆಗಾರಿಕೆಗಳನ್ನು ಸಂಬಂಧಿಸಿದ ಸಾಧನಗಳ ಒಡಂಬಡಿಕೆ ನಿಯಮಗಳಿಗೆ ಬಾಗಿಧಾರನಾದಾಗಿನಿಂದ ಗುರುತಿಸುತ್ತದೆ. ಎಲ್ಲಾ ಆರ್ಥಿಕ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಆರಂಭಿಕವಾಗಿ ಫೇರ್ ವ್ಯಾಲ್ಯೂನಲ್ಲಿ ಗುರುತಿಸಲಾಗುತ್ತದೆ. ಆದರೆ ಮಾರಾಟ ವಹಿವಾಟಿನಿಂದ ಬರಬೇಕಾದವುಗಳನ್ನು ಆರಂಭಿಕವಾಗಿ ಮಾರಾಟ ಬೆಲೆಯಲ್ಲಿ ಗುರುತಿಸಲಾಗುತ್ತದೆ. ಆರ್ಥಿಕ ಆಸ್ತಿಗಳ ಮತ್ತು ಆರ್ಥಿಕ ಹೊಣೆಗಾರಿಕೆಗಳ ಸ್ವಾಧೀನ ಅಥವಾ ವಿತರಣೆಗೆ ನೇರವಾಗಿ ಕಾರಣವಾಗುವ ವಹಿವಾಟು ವೆಚ್ಚಗಳನ್ನು ಫೇರ್ ವ್ಯಾಲ್ಯೂಗಳಲ್ಲದವುಗಳನ್ನು ಲಾಭ ಅಥವಾ ನಷ್ಟದ ಖಾತೆಗೆ ಫೇರ್ ವ್ಯಾಲ್ಯೂನಲ್ಲಿ ಆರಂಭಿಕವಾಗಿ ಸೇರಿಸಲಾಗುತ್ತದೆ. ಆರ್ಥಿಕ ಆಸ್ತಿಗಳ ಸಾಮಾನ್ಯ ಖರೀದಿ ಮತ್ತು ಮಾರಾಟವನ್ನು ವ್ಯಾಪಾರ ದಿನಾಂಕಕ್ಕೆ ಲೆಕ್ಕಹಾಕಲಾಗುತ್ತದೆ.

**ತದನಂತರದ ಗುರುತಿಸುವಿಕೆ.**

**ಅ) ಉತ್ಪನ್ನವಲ್ಲದ ಆರ್ಥಿಕ ಸಾಧನಗಳು**

**1) ಆರ್ಥಿಕ ಆಸ್ತಿಗಳನ್ನು ಅಮಾರ್ಟೈಸ್ಡ್ ವೆಚ್ಚದಲ್ಲಿ ಗುರುತಿಸಿದ್ದು.**

ಆರ್ಥಿಕ ಆಸ್ತಿಗಳನ್ನು ನಂತರದಲ್ಲಿ ಅಮಾರಟೈಸ್ಡ ವೆಚ್ಚದಲ್ಲಿ ಗುರುತಿಸುವಿಕೆಯು, ಈ ಆಸ್ತಿಗಳು ವ್ಯವಹಾರದ ಮಾದರಿಯಲ್ಲಿ ಇದ್ದಾಗ ಆಸ್ತಿಗಳನ್ನು ಹೊಂದಿರುವ ಉದ್ದೇಶವು ಮುಂದೆ ಒಡಂಬಡಿಕೆಯ ಪರಿಣಾಮವಾಗಿ ಒಡಂಬಡಿಕೆಯ ನಗದು ಹರಿವನ್ನು ಪಡೆಯುವುದಕ್ಕಾಗಿ ಇದ್ದು ಆರ್ಥಿಕ ಆಸ್ತಿಗಳ ಒಡಂಬಡಿಕೆಯ ನಿಬಂಧನೆಗಳು ನಗದು ಹರಿವುಗಳ ದಿನಾಂಕವನ್ನು ನಿರ್ದಿಷ್ಟ ಪಡಿಸುತ್ತವೆ, ಇವುಗಳು ಅಸಲು ಮತ್ತು ಬಾಕಿ ಅಸಲಿನ ಮೇಲಿನ ಬಡ್ಡಿಯಾಗಿರುತ್ತವೆ.

**2) ಆರ್ಥಿಕ ಆಸ್ತಿಗಳನ್ನು ಫೇರ್ ವ್ಯಾಲ್ಯು ನಲ್ಲಿ ಇತರೆ ಸಮಗ್ರ ಆದಾಯದಲ್ಲಿ ಗುರುತಿಸುವುದು**

ಆರ್ಥಿಕ ಆಸ್ತಿಗಳನ್ನು ನಂತರದಲ್ಲಿ ಫೇರ್ ವ್ಯಾಲ್ಯುನಲ್ಲಿ ಇತರೆ ಸಮಗ್ರ ಆದಾಯದಲ್ಲಿ ಗುರುತಿಸುವಿಕೆಯು, ಈ ಆಸ್ತಿಗಳು ವ್ಯವಹಾರದ ಮಾದರಿಯಲ್ಲಿ ಇದ್ದಾಗ ಆಸ್ತಿಗಳನ್ನು ಹೊಂದಿರುವ ಉದ್ದೇಶವು ಒಡಂಬಡಿಕೆ ನಗದು ಹರಿವನ್ನು ಪಡೆಯುವ ಮತ್ತು ಆರ್ಥಿಕ ಆಸ್ತಿಯನ್ನು ಮಾರುವ ಕ್ರಿಯೆಯು ಪೂರ್ಣಗೊಳ್ಳುತ್ತದೆ ಮತ್ತು ಒಡಂಬಡಿಕೆಯ ನಿಬಂಧನೆಗಳು ನಗದು ಹರಿವುಗಳ ದಿನಾಂಕವನ್ನು ನಿರ್ದಿಷ್ಟ ಪಡಿಸುತ್ತವೆ, ಇವುಗಳು ಅಸಲು ಮತ್ತು ಬಾಕಿ ಅಸಲಿನ ಮೇಲಿನ ಬಡ್ಡಿಯಾಗಿರುತ್ತವೆ

**3) ಆರ್ಥಿಕ ಆಸ್ತಿಗಳನ್ನು ಫೇರ್ ವ್ಯಾಲ್ಯು ನಲ್ಲಿ ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಗುರುತಿಸುವುದು.**

ಆರ್ಥಿಕ ಆಸ್ತಿಗಳನ್ನು ಮೇಲಿನ ಯಾವುದೇ ಗುಂಪುಗಳಲ್ಲಿ ವರ್ಗೀಕರಸಲ್ಪಟ್ಟಿಲ್ಲದಿದ್ದರೆ ನಂತರದಲ್ಲಿ ಫೇರ್ ವ್ಯಾಲ್ಯು ಮುಖಾಂತರ ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಗುರುತಿಸಲ್ಪಡುತ್ತದೆ.

**4) ಆರ್ಥಿಕ ಹೊಣೆಗಾರಿಕೆಗಳು:**

ಆರ್ಥಿಕ ಹೊಣೆಗಾರಿಕೆಗಳನ್ನು ನಂತರದಲ್ಲಿ ಅನ್ವಯಿಸುವ ಬಡ್ಡಿ ವಿದಾನದಲ್ಲಿ ಅಮಾರಟೈಸ್ಡ ವೆಚ್ಚದಲ್ಲಿ ಗುರುತಿಸಲಾಗುತ್ತದೆ. ಮಾರಾಟ ಮತ್ತು ಇತರೆ ಪಾವತಿಬೇಕಾದ ಮೊತ್ತಗಳು ಆಸ್ತಿ ಹೊಣೆಗಾರಿಕೆ ಪಟ್ಟಿಯ ದಿನಾಂಕ ದಿಂದ ಒಂದು ವರ್ಷದ ಅವಧಿಯಲ್ಲಿ ಮುಕ್ತಾಯಗೊಳ್ಳುವುದಿದ್ದರೆ, ಅಲ್ಪಾವಧಿ ಮುಕ್ತಾಯಗೊಳ್ಳುವಿಕೆಯಿಂದಾಗಿ ಈ ಹೊಣೆಗಾರಿಕೆಗಳನ್ನು ಅಂದಾಜು ಫೇರ್ ವ್ಯಾಲ್ಯೂನಲ್ಲಿ ಗುರುತಿಸಲಾಗುತ್ತದೆ.

**ಆ) ಷೇರು ಬಂಡವಾಳ:**

**ಈಕ್ವಿಟಿ ಷೇರುಗಳು**

ಈಕ್ವಿಟಿ ಷೇರುಗಳನ್ನು ಈಕ್ವಿಟಿಯಾಗಿ ವರ್ಗೀಕರಿಸಲಾಗಿದೆ. ಹೊಸ ಈಕ್ವಿಟಿ ಷೇರುಗಳನ್ನು ಬಿಡುಗಡೆ ಸಂದರ್ಭದಲ್ಲಿ ನೇರವಾಗಿ ಸಂಬಂಧಿಸುವ ವೆಚ್ಚಗಳನ್ನು ನಿವ್ವಳವಾಗಿ ತೆರಿಗೆಗಳನ್ನು ಪರಿಗಣಿಸಿ ಈಕ್ವಿಟಿಯಿಂದ ಕಳೆದು ಗುರುತಿಸಲ್ಪಡುತ್ತದೆ.

**ಆರ್ಥಿಕ ಸಾಧನಗಳ ಅಪನಗದೀಕರಣ**

ಆರ್ಥಿಕ ಆಸ್ತಿಗಳ ಒಡಂಬಡಿಕೆಯ ಹಕ್ಕುಗಳ ಪ್ರಕಾರ ಅವಧಿ ಮುಗಿದ ನಂತರ ನಗದು ಹರಿವು ಮುಕ್ತಾಯಗೊಳ್ಳುವ ಅಥವಾ ಆರ್ಥಿಕ ಆಸ್ತಿಯು ವರ್ಗಾವಣೆಗೊಳಪಡುವ ಮತ್ತು ವರ್ಗಾವಣೆಯು ಇಂಡ್ ಎ.ಎಸ್ 109ಗೆ ಅನ್ವಯವಾಗುವ ಸಂದರ್ಭದಲ್ಲಿ ಸಂಬಂಧಿಸಿದ ಆರ್ಥಿಕ ಆಸ್ತಿಗಳು ಗುರುತಿಸಲ್ಪಡುತ್ತವೆ. ಆರ್ಥಿಕ ಹೊಣೆಗಾರಿಕೆ (ಆಥವಾ ಆರ್ಥಿಕ ಹೊಣೆಗಾರಿಕೆಯ ಭಾಗ)ಯು ಒಡಂಬಡಿಕೆಯಲ್ಲಿ ನಿರ್ದೇಶಿಸಲ್ಪಪಟ್ಟ ನಿಬಂಧನೆಗಳನ್ನು ನಿಭಾಯಿಸಿದಾಗ ಅಥವಾ ರದ್ದುಗೊಳಿಸಿದಾಗ ಅಥವಾ ಪೂರ್ಣಗೊಂಡಾಗ ನಿಗಮದ ಆಸ್ತಿ ಹೊಣೆಗಾರಿಕೆ ಪಟ್ಟಿಯಲ್ಲಿ ಗುರುತಿಸಲ್ಪಪಡುತ್ತವೆ.

**ಆರ್ಥಿಕ ಆಸ್ತಿಗಳ ನ್ಯಾಯೋಚಿತ ಮೌಲ್ಯ (ಫೇರ್ ವ್ಯಾಲ್ಯು)**

